Deepavali Special

ತುಂಗ ಬಿಂಬ

ದೀಪಾವಳಿ ವಿಶೇಷ ಸಂಚಿಕೆ

TUNGA BIMBA | KANNADA DAILY MORNING | ಕನ್ನಡ ದಿನ ಪತ್ರಿಕೆ

09-11-2026 ಸೋಮವಾರ RNI No: KARAN/2023/86923 tungabimba@gmail.com ಸಂಪಾದಕರು : ಗುರುರಾಜ ಕೆ Editor: Gururaja K

ತುಂಗ ಬಿಂಬ ಪತ್ರಿಕೆಯ ಓದುಗರಿಗೆ ದೀಪಾವಳಿ ಶುಭಾಶಯಗಳು

ನಮ್ಮ ತುಂಗ ಬಿಂಬ ಪತ್ರಿಕೆಯ ಎಲ್ಲ ಓದುಗರಿಗೂ ಹರ್ಷೋಲ್ಲಾಸದಿಂದ ಕೂಡಿದ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.

ನಿಮ್ಮ ಬೆಂಬಲ, ನಂಬಿಕೆ ಮತ್ತು ಆಸಕ್ತಿಯೇ ನಮ್ಮ ಪತ್ರಿಕೆಯ ಶಕ್ತಿ.

ವಿಶೇಷವಾಗಿ ನಮ್ಮ ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಿಸಿ ಬೆಂಬಲ ನೀಡಿದ ಎಲ್ಲಾ ದಾತರಿಗೆ ಹೃತ್ಪೂರ್ವಕ ಧನ್ಯವಾದಗಳು.

ನಿಮ್ಮೆಲ್ಲರ ಜೀವನದಲ್ಲಿ ಬೆಳಕಿನ ಹಬ್ಬವಾದ ದೀಪಾವಳಿ ಸಂತೋಷ, ಆರೋಗ್ಯ ಮತ್ತು ಸಮೃದ್ಧಿಯನ್ನು ತರಲಿ ಎಂಬ ಹಾರೈಕೆ.




ರಾಯಚೂರು–ಯಾದಗಿರಿ

ಜಿಲ್ಲೆಯ ಸಮಸ್ತ ಜನತೆಗೆ

ದೀಪಾವಳಿ ಹಬ್ಬದ

ಹಾರ್ದಿಕ ಶುಭಾಶಯಗಳು..





ಜಿ.ಕುಮಾರ ನಾಯಕ

ಸಂಸದರು,
ರಾಯಚೂರು ಲೋಕಸಭಾ ಕ್ಷೇತ್ರ.



ಮೂರು ವರ್ಷಗಳ ಅಭಿವೃದ್ಧಿಯ ಹೆಜ್ಜೆಗುರುತು!

ರಾಯಚೂರಿನ ಪ್ರಗತಿಗೆ ಹಲವು ವಲಯಗಳಲ್ಲಿ ಮಹತ್ವದ ಬಲ!

3 ವರ್ಷ



ಸಾಧನೆಗಳ ಹರ್ಷ

RAICHUR RAISING

₹1695 ಕೋಟಿ
ರಾಯಚೂರು, ಮಾನ್ವಿ , ಸಿಂಧನೂರು SH- 23 ಚತುಷ್ಪಥ ರಸ್ತೆ ನಿರ್ಮಾಣ

₹155 ಕೋಟಿ
ಕರ್ನಾಟಕ-ತೆಲಂಗಾಣ ಸಂಪರ್ಕ ಕಲ್ಪಿಸುವ ಶಕ್ತಿನಗರ ಕೃಷ್ಣಾ ನದಿ ಸೇತುವೆ

₹31.50 ಕೋಟಿ
ರಾಯಚೂರು-ಮಂಚಲಾಪುರ ರೈಲ್ವೆ ಮೇಲ್ಸೇತುವೆ.

₹82.22 ಕೋಟಿ
ಸಣ್ಣ ನೀರಾವರಿ ಹಾಗೂ ಬೋರ್‌ವೆಲ್ ಕಾಮಗಾರಿಗಳು.

₹34 ಕೋಟಿ
ಬಾಜಿ-ಅಸ್ಕಿಹಾಳ್ ದಿಂದ -ಲಿಂಗಸೂಗೂರು ರಸ್ತೆ ಮಾರ್ಗ. 5 ಕಿಮೀ. SH-20 ರಸ್ತೆ ಅಭಿವೃದ್ಧಿ.

₹10 ಕೋಟಿ
ಓಪೆಕ್ ಆಸ್ಪತ್ರೆಯಲ್ಲಿ ಟ್ರಾಮಾ ಸೆಂಟರ್

₹1.50 ಕೋಟಿ
ದೇವರಾಜ ಅರಸು ಪುತ್ಥಳಿ

₹219 ಕೋಟಿ
ರಾಯಚೂರು ವಿಮಾನ ನಿಲ್ದಾಣ ಯೋಜನೆ

₹25 ಕೋಟಿ
ಚಂದ್ರಮೌಳೇಶ್ವರ, ಗಂಜ್ ಸಿಸಿ ರಸ್ತೆ ಚರಂಡಿ ನಿರ್ಮಾಣಕೆ ಅನುಮೋದನೆ.

₹31.77 ಕೋಟಿ
ಅಮೃತ ನಗರೋತ್ಥಾನ ಯೋಜನೆ.

₹50 ಕೋಟಿ
ಕ್ಯಾನ್ಸರ್ ಚಿಕಿತ್ಸಾ ಘಟಕ.

₹47.32 ಕೋಟಿ
ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ.

₹37.95 ಕೋಟಿ
ಕಟ್ಟಡ ಕಾರ್ಮಿಕರ ಮಕ್ಕಳ ವಸತಿ ಶಾಲೆ.

₹17 ಕೋಟಿ
ರಾಜಕಾಲುವೆ ಹಾಗೂ ಮಳೆ ನೀರು ಚರಂಡಿ ಅಭಿವೃದ್ಧಿ

₹3.50 ಕೋಟಿ
ಶಿವಾಜಿ ವೃತ್ತ ಅಭಿವೃದ್ಧಿ

₹1 ಕೋಟಿ
ಸಿಸಿ ಟಿವಿ ಕಣ್ಗಾವಲು ವ್ಯವಸ್ಥೆ

₹10 ಕೋಟಿ
ಸಿಎಸ್‌ಆರ್ ಅನುದಾನದಲ್ಲಿ ಗ್ರಾಮೀಣ ಅಭಿವೃದ್ಧಿ ಕಾಮಗಾರಿಗಳು

₹22.25 ಕೋಟಿ
ಕೆಟಗರಿ 2 ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪನೆ.

₹185 ಕೋಟಿ
ನಗರಾಭಿವೃದ್ಧಿ ಕಾಮಗಾರಿಗಳು

₹86.76 ಕೋಟಿ
ಮಾಪಿನ ಕೆರೆ ಅಭಿವೃದ್ಧಿ.

₹25 ಕೋಟಿ
ಸಿರಿಧಾನ್ಯಗಳ ಮೌಲ್ಯ ಸರಪಳಿ ಉದ್ಯಾನ.

₹3 ಕೋಟಿ
ರಾಯಚೂರಿನಲ್ಲಿ ನಾಲ್ಕು ಎಕರೆ ವಿಸ್ತೀರ್ಣದಲ್ಲಿ ಈದ್ಗಾ ಮೈದಾನ ನಿರ್ಮಾಣ.

₹8 ಕೋಟಿ
ನೀರಭಾವಿ ಕುಂಟೆ ಕೆರೆ ಅಭಿವೃದ್ಧಿ

₹5 ಕೋಟಿ
ಬಾಬು ಜಗಜೀವನ್ ರಾಮ್ ಭವನ ಅನುಮೋದನೆ

₹1 ಕೋಟಿ
ರಾಯಚೂರು ಕೋಟೆಗೆ ವಿದ್ಯುತ್ ದೀಪಾಲಂಕಾರ ಮತ್ತು ಅಭಿವೃದ್ಧಿ

ಅಂಬೇಡ್ಕರ್ ವೃತ್ತ ನಿರ್ಮಾಣ.

ತ್ಯಾಜ್ಯ ವಿಲೇವಾರಿ ಘಟಕ ಅಭಿವೃದ್ಧಿ.

ನೂರಾರು ಕೋಟಿ ರೂ ವೆಚ್ಚದಲ್ಲಿ ಅಂತರ್ಜಲ ವೃದ್ಧಿಗಾಗಿ ಜಿಲ್ಲೆಯ ಕೆರೆ-ಕಟ್ಟೆ , ಹಳ್ಳ-ಕೊಳ್ಳಗಳ ಪುನಶ್ಚೇತನ ಹಾಗೂ ರೈತರ ಜಮೀನುಗಳಿಗೆ ಸಂಪರ್ಕ ಸೇತುವೆಗಳು.

ಅಂದಾಜು ₹210 ಕೋಟಿ ಅನುದಾನದಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿ.

- ರಾಯಚೂರಿನ ವಿವಿಧ ಬಡಾವಣೆಗಳಲ್ಲಿ ಸಿಸಿ ರಸ್ತೆ ಮತ್ತು ಚರಂಡಿ **₹130.48 ಕೋಟಿ**
- ಕುಡಿಯುವ ನೀರಿಗಾಗಿ **₹49.00 ಕೋಟಿ**
- ವಿದ್ಯುತ್ ದೀಪ ಮತ್ತು ಹೈಮಾಸ್ಟ್ **₹5.18 ಕೋಟಿ**
- ಮಹಿಳಾ ಸಮಾಜ ರಂಗಮಂದಿರ **₹3.81 ಕೋಟಿ**
- ಉದ್ಯಾನವನ ಅಭಿವೃದ್ಧಿ **₹2.50 ಕೋಟಿ**
- ಶಾಲಾ ಕಟ್ಟಡಗಳು **₹3.85 ಕೋಟಿ**
- ವಿದ್ಯುತ್ ಚಿತಾಗಾರ,ಸಾರ್ವಜನಿಕ ಶೌಚಾಲಯಗಳು **₹3.00 ಕೋಟಿ**
- ವಿವಿಧ ವೃತ್ತಗಳ ಅಭಿವೃದ್ಧಿ **₹3.50 ಕೋಟಿ,** ಯರಮರಸ್ ಸೇರಿದಂತೆ ವಿವಿಧ ವಾರ್ಡ್ ಗಳಲ್ಲಿ **5 ಕೋಟಿ** ವೆಚ್ಚದಲ್ಲಿ ಆಟ ದ ಮೈದಾನ ಅಭಿವೃದ್ಧಿ.

ಪ್ರತಿ ವಲಯದ ಪ್ರಗತಿಗೆ ಆದ್ಯತೆ,
ರಾಯಚೂರಿನ ಸಮಗ್ರ ಅಭಿವೃದ್ಧಿಗೆ ಬದ್ಧತೆ!



ಸಮಸ್ತರಿಗೂ **ದೀಪಾವಳಿ ಹಬ್ಬದ** ಹಾರ್ದಿಕ ಶುಭಾಶಯಗಳು

ಬೆಳಕೇ ನಿನ್ನೊಲುಮೆಯಿಂ..,
ಹೃದಯದೊಳು ಒಲುಮೆಯ ಗೀತೆ ತೇಲಿಬರುತ್ತಿರಲಿ ಎದೆಯಿಂದ ಎದೆಗೆ..,
ನಿನ್ನ ಪ್ರೀತಿಯ ಗಾಳಿ ಸೋಕಿ ದ್ವೇಷ ಸ್ವಾರ್ಥವ ಹೊರಗೆ ನೂಕಿ...






ಸಮಸ್ತ ನಾಡಿನ ಜನತೆಗೆ

ದೀಪಾವಳಿ

ಹಬ್ಬದ ಹಾರ್ದಿಕ ಶುಭಾಶಯಗಳು.

ಶುಭಕೋರುವವರು

ಡಾ|| ಎಸ್.ಶಿವರಾಜ ಪಾಟೀಲ
ರಾಯಚೂರು ನಗರ ಶಾಸಕರು (ಬಿ.ಜೆ.ಪಿ)



ಕತ್ತಲೆ ತುಂಬಿರುವ ಜೀವನದಲ್ಲಿ ಬೆಳಕನ್ನು ಹರಿಸಿ ಬದುಕನ್ನು ಹಸನಾಗಿಸುವ ಬೆಳಕಿನ ಹಬ್ಬ ದೀಪಾವಳಿ

ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು



ಶ್ರೀ ಬಸನಗೌಡ ದದ್ದಲ್

ಶಾಸಕರು ರಾಯಚೂರು ಗ್ರಾಮಾಂತರ

ಸಮಸ್ತ ನಾಡಿನ ಜನತೆಗೆ

ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು

ಪುರಸಭೆ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ

ಲಿಂಗಸೂಗೂರು



ಶ್ರೀ ಜಿ ಕುಮಾರ ನಾಯಕ
ಸಂಸದರು ರಾಯಚೂರು ಲೋಕಸಭಾಕ್ಷೇತ್ರ



ಶ್ರೀ ಮಾನಪ್ಪ ಡಿ ವಜ್ಜಲ್
ಶಾಸಕರು ಲಿಂಗಸುಗೂರು ವಿಧಾನಸಭಾಕ್ಷೇತ್ರ



ಶ್ರೀ ಶರಣಗೌಡ ಪಾಟೀಲ್ ಬಯ್ಯಾಪೂರ
ವಿಧಾನ ಪರಿಷತ್ ಸದಸ್ಯರು ರಾಯಚೂರು-ಕೊಪ್ಪಳ

ದೀಪಾವಳಿ ಹಬ್ಬದ ಶುಭಾಶಯಗಳು





ಶ್ರೀ ನಾಗೇಂದ್ರ ಬಾಬು ಕುಮಾರ
ಸಹಾಯಕ ಆಯುಕ್ತರು ಹಾಗೂ ಆಡಳಿತಾಧಿಕಾರಿಗಳು
ಪುರಸಭೆ, ಲಿಂಗಸುಗೂರು



ಶ್ರೀ ನಟರಾಜ ಹೆಚ್.ಎನ್
ಮುಖ್ಯಾಧಿಕಾರಿಗಳು
ಪುರಸಭೆ, ಲಿಂಗಸುಗೂರು

ಪುರಸಭೆ, ಲಿಂಗಸೂಗೂರು

ನಾಡಿನ ಸಮಸ್ತ ಜನತೆಗೆ

ದೀಪಾವಳಿಯ ಹಬ್ಬದ

ಹಾರ್ದಿಕ ಶುಭಾಶಯಗಳು

ಶ್ರೀ ಬಸವೇಶ್ವರ ಮೋಟರ್ಸ್

ಶ್ರೀ ವೀರಭದ್ರೇಶ್ವರ ಇಂಡಸ್ಟ್ರೀಸ್,ಮಾನ್ವಿ

ಶ್ರೀ ಬಸವೇಶ್ವರ ಇಂಡಸ್ಟ್ರೀಸ್,ಮಾನ್ವಿ

ಶೈಲಜಾ ಏಜೆನ್ಸೀಸ್,ಮಾನ್ವಿ ಮಹಾಂತೇಶ್ವರ ಟ್ರೇಡರ್ಸ್,ಮಾನ್ವಿ

ಶ್ರೀ ವೀರಭದ್ರೇಶ್ವರ ಕೋಲ್ಡ್ ಸ್ಟೋರೇಜ್

ವಿ.ಟಿ.ಎಮ್ ಕಂಪನಿ, ಮಾನ್ವಿ



ವೀರಭದ್ರಪ್ಪಗೌಡ ಆಲ್ದಾಳ್
ಉದ್ಯಮಿಗಳು ಮಾನವಿ



ಸಿದ್ದಪ್ಪಗೌಡ ಆಲ್ದಾಳ್
ಉದ್ಯಮಿಗಳು ಮಾನವಿ



ಬಸವನಗೌಡ ಆಲ್ದಾಳ್
ಉದ್ಯಮಿಗಳು ಮಾನವಿ

Vijay Poly Clinic & Nursing Home
VGK Heart Institute, Raichur

ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ
ಹಾರ್ದಿಕ ಶುಭಾಶಯಗಳು





Dr. V.G. Kulkarni
Vijay Poly Clinic
& Nursing home
Obstetrician & Gynecologist



Dr. Ajit V.Kulkarni
MD, DM. Cardiology,
FSCAI (USA)
(PGI Chandigarh)
Consultant Interventional
Cardiologist



Dr Madhavi A Kulkarni
MBBS, MD
(Pathology) Consultant
Pathologist



ವಿ.ಜಿ.ಕೆ.
ಹಾರ್ಟ್ ಇನ್ಸ್ಟಿಟ್ಯೂಟ್‌ನಲ್ಲಿ
ದೊರೆಯುವ ಸೌಲಭ್ಯಗಳು

-: ಕ್ಯಾತ್‌ಲ್ಯಾಬ್ ಸೌಲಭ್ಯಗಳು :-
ಪ್ರಾಥಮಿಕ ಆಂಜಿಯೋಪ್ಲಾಸ್ಟಿ, ಆಂಜಿಯೋಗ್ರಾಮ್ ಮತ್ತು ಆಂಜಿಯೋಪ್ಲಾಸ್ಟಿ, ಹುಟ್ಟಿನಿಂದ ಇರುವ ಹೃದಯ ರೋಗಗಳ (Abnormality) ಚಿಕಿತ್ಸೆ, ಪೇಸ್ ಮೇಕರ್, ತೆರೆದ ಹೃದಯ ಶಸ್ತ್ರ ಚಿಕಿತ್ಸೆ, ಕವಾಟಗಳ ಬದಲಾವಣೆ, ಹೃದಯಕ್ಕೆ ಸಂಬಂಧಪಟ್ಟ ಶಸ್ತ್ರ ಚಿಕಿತ್ಸೆಗಳು ಎದೆಗೂಡಿನ (ಪುಪ್ಪುಸಗಳು, ಶ್ವಾಸಕೋಶ) ಶಸ್ತ್ರಚಿಕಿತ್ಸೆಗಳು.

24x7 ಹೃದಯ ಚಿಕಿತ್ಸೆ,
24x7 ತುರ್ತು ಚಿಕಿತ್ಸೆ,
ಆಧುನಿಕ ತೀವ್ರನಿಗಾ ಚಿಕಿತ್ಸಾ ಘಟಕ

- ಕಲ್ಯಾಣ ಕರ್ನಾಟಕದಲ್ಲಿ ಬೈಪಾಸ್ ಶಸ್ತ್ರಚಿಕಿತ್ಸೆ ಆರಂಭಿಸಿದ ಮೊದಲ ಖಾಸಗಿ ಆಸ್ಪತ್ರೆ
- ಕಲ್ಯಾಣ ಕರ್ನಾಟಕದಲ್ಲಿ IVUS ಮತ್ತು FFR ನಂತಹ ಸೌಲಭ್ಯಗಳನ್ನು ಹೊಂದಿರುವ ಪ್ರಥಮ ಕೇಂದ್ರ


First 3D Echocardiogram & IVUS Machine in Kalyana Karnataka Region

-: ನಮ್ಮಲ್ಲಿ ಆರೋಗ್ಯ ವಿಮೆ ಸೌಲಭ್ಯಗಳು ಲಭ್ಯವಿದೆ :-
✔ ಪೊಲೀಸ್ ಇಲಾಖೆ ಉಚಿತ ಆರೋಗ್ಯ ಸೇವೆ ✔ ಬಿಪಿಎಲ್ ಕಾರ್ಡ್ ಉಚಿತ ಆರೋಗ್ಯ ಸೇವೆ
✔ ಆರ್‌ಟಿಪಿಎಸ್ ಉಚಿತ ಆರೋಗ್ಯ ಸೇವೆ ✔ ರೈಲ್ವೆ ಇಲಾಖೆ ಉಚಿತ ಆರೋಗ್ಯ ಸೇವೆ
✔ ಹಟ್ಟಿ ಚಿನ್ನದ ಗಣಿ ಆರೋಗ್ಯ ಸೇವೆ ✔ ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಸಂಸ್ಥೆಯ ಇನ್ಸೂರೆನ್ಸ್ ಸೇವೆ ಸೌಲಭ್ಯ ಹೊಂದಿದೆ.

1-9-21, Azadnagar, Raichur.
Cell: 9482350777 Ph : 08532 -230777
Web : www.vijaypolyclinic.com



Philips CVXI Advanced Echocardiograpy



ನವರಾತ್ರಿ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು

ಡಾ|| ಭಾಲ್ಕಿ ಆಸ್ಪತ್ರೆ DR. BHALKI HOSPITAL

ಡಾ|| ನಾಗರಾಜ ಭಾಲ್ಕಿ
Dr. Nagaraja Bhalki
MBBS., MS. Gen. Surgery
General Surgeon
Endoscopic & Laproscopic Surgeon

ಡಾ|| ಪ್ರಿಯಾ ಕೆ. ಭಾಲ್ಕಿ
Dr. Priya K. Bhalki
MBBS., MD., Gen. Medicine
General Physician Cardiologist & Diabetologist






Call : 9845343568, 9663743568.
Old Dhanvantri Hospital Building
13-10-44, "A.S. Complex"
Opp. Swagat Garden, Goushala Road, Raichur

KOF SINCE 1984
ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ ನಿ.,
(ಕೆ.ಓ.ಎಫ್) ಅಂಚೆ ಪೆಟ್ಟಿಗೆ ಸಂಖ್ಯೆ -328, ಹೈದ್ರಾಬಾದ್ ರಸ್ತೆ, ರಾಯಚೂರು-584102
Safal

ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು



ಆರು ಬಾರಿ ರಾಷ್ಟ್ರೀಯ ಉತ್ಪಾದಕತೆ ಪ್ರಶಸ್ತಿ ವಿಜೇತರು.
ಅಂತರಾಷ್ಟ್ರೀಯ (ಮೆಕ್ಸಿಕೋ) ಡೈಮಂಡ್ ಸ್ಟಾರ್ ಗುಣಮಟ್ಟ ಪ್ರಶಸ್ತಿ ವಿಜೇತರು









R.K.B. FOUNDATION'S LIVE & LET LIVE
ಎಂ. ಕೆ. ಭಂಡಾರಿ ಆಸ್ಪತ್ರೆ, ರಾಯಚೂರು
M.K. BHANDARI HOSPITAL
A MULTISPECIALITY CARE UNDER ONE ROOF

"Achievers of Karnataka"
Bhandari Family Pay back to Raichur
Times of India Group in Vijay Karnataka Awarded in 2018

MOTTO : SERVICE TO HUMANITY SERVICE TO GOD
VISION : NO PATIENT SHOULD BE DENIED BECAUSE HE / SHE CAN'T AFFORD
MISSION : TO STRIVE FOR PUBLIC TRUST

32 Year's of Untiring Services & Dedication

ದೀಪಾವಳಿ ಹಬ್ಬದ ಹಾರ್ದಿಕ
ಶುಭಾಶಯಗಳು

FREE SURGERY

Chairman Trustee

SCHEMES AVAILABLE
Ayushman Bharat – Arogya Karnataka (AB ARK)
Karnataka Arogya Suraksha Sanjeevini (KASS)
ABY for Police, Fire and Prison Department
K P T C L
K S R T C
GESCOM
Yeshaswini
All Insurances

DIALYSIS SERVICE'S SUBSIDIARIES COST

SOCIAL & MULTIFLORIOUS ACTIVITIES :
FREE ARTIFICIAL LIMB FOR BENEFICIARIES 24500
FREE CLEFTLIP AND PALLATE SURGERIES 17300
FREE CATARACT SURGERIES 2000

CHAIRMAN & BOARD OF TRUSTEES, CONSULTANT DOCTORS, ADMINISTRATIVE STAFF, NURSING STAFF & ALL STAFF

Gowshala Road, Opp: Gowshala, Raichur – 584101, Ph: 6360751934, e-mail : mkbhospital1994@gmail.com

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಉದ್ದಿಮೆ)



ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



ಡಾ. ಜಿ. ಪರಮೇಶ್ವರ
ಉಪ ಮುಖ್ಯಮಂತ್ರಿಗಳು, ಕಂದಾಯ,
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು
ಕರ್ನಾಟಕ ಸರ್ಕಾರ

ನಾಡಿನ ಸಮಸ್ತ ಬಂಧುಗಳಿಗೆ

ದೀಪಾವಳಿ

ಹಬ್ಬದ ಶುಭಾಶಯಗಳು

ಕಂಪನಿಯ ಚಿನ್ನದ ಗಣಿಗಳು

- ಹಟ್ಟಿ ಚಿನ್ನದ ಗಣಿ, ಲಿಂಗಸುಗೂರು ತಾಲ್ಲೂಕು
- ಊಟಿ ಚಿನ್ನದ ಗಣಿ, ದೇವದುರ್ಗ ತಾಲ್ಲೂಕು
- ಹೀರಾ-ಬುದ್ದಿನ್ನಿ ಚಿನ್ನದ ಗಣಿ, ಸಿರವಾರ ತಾಲ್ಲೂಕು

ಹಟ್ಟಿ ಚಿನ್ನದ ಗಣಿ ಕಂಪನಿಯ ಪ್ರಗತಿಯ ವಿವರಗಳು

- 2025-26ನೇ ಸಾಲಿನ ಚಿನ್ನದ ಉತ್ಪಾದನೆ 1.69 ಟನ್,
  ಇದುವರೆಗಿನ ಒಟ್ಟು ಚಿನ್ನದ ಉತ್ಪಾದನೆ 95.84 ಟನ್
- 2025-26ನೇ ಸಾಲಿನ ವಾರ್ಷಿಕ ವಹಿವಾಟು 1920.81 ಕೋಟಿ,
  869.47 ಕೋಟಿ ರೂ.ಗಳ ಲಾಭದ ಸಾಧನೆ (Provisional)
- ಸುಸ್ಥಿರ ಗಣಿಗಾರಿಕೆಗಾಗಿ ಅತ್ಯಾಧುನಿಕ ವೈಂಡಿಂಗ್ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಹೊಸ ಸರ್ಕ್ಯುಲರ್ ಶಾಫ್ಟ್ ಸ್ಥಾಪಿಸಲಾಗಿದೆ.
- ಅದಿರು ಸಂಸ್ಕರಣಾ ಸಾಮರ್ಥ್ಯವನ್ನು ಹೆಚ್ಚಿಸಲು 2 x 50 TPH ಬಾಲ್ ಮಿಲ್ ಅದಿರು ಸಂಸ್ಕರಣಾ ಘಟಕವನ್ನು ಪ್ರಾರಂಭಿಸಲಾಗಿದೆ
- ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರು ಹಾಗೂ ಸಿಬ್ಬಂದಿಗಳಿಗೆ ವಸತಿ ಸಮುಚ್ಚಯ ನಿರ್ಮಾಣ ಕ್ರಿಯೆ ಪ್ರಕ್ರಿಯೆಯಲ್ಲಿದೆ.

ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿ



ಹ.ಚಿ.ಗ. ಕ್ರೀಡಾಸಂಸ್ಥೆ ವತಿಯಿಂದ ನೌಕರರ ಹಾಗೂ ಅವರ ಕುಟುಂಬ ಸದಸ್ಯರಿಗೆ ಏರ್ಪಡಿಸಲಾಗಿರುವ ವಿವಿಧ ಕ್ರೀಡಾಕೂಟಗಳು





ಹಟ್ಟಿ ಚಿನ್ನದ ಗಣಿ ಕಂಪನಿಯ ನೌಕರರ ಮಕ್ಕಳಿಗಾಗಿ ಕೇಂದ್ರಿಯ ವಿದ್ಯಾಲಯ ಸ್ಥಾಪನೆ



ಕಾರ್ಮಿಕ ಕಲ್ಯಾಣ ಸೌಲಭ್ಯಗಳು

- ಸುಸಜ್ಜಿತ 120 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ
- ಸಂಸ್ಥೆಯ ಪ್ರಾಯೋಜಿತ ಕೇಂದ್ರೀಯ ವಿದ್ಯಾಲಯ
- ಪೌಷ್ಟಿಕ ಆಹಾರಕ್ಕಾಗಿ ರಿಯಾಯಿತಿ ದರದಲ್ಲಿ ಕ್ಯಾಂಟೀನಿನಲ್ಲಿ ಊಟ / ಉಪಹಾರದ ವ್ಯವಸ್ಥೆ
- ಕುಟುಂಬ ನಿರ್ವಹಣೆಗೆ ಅರ್ಹ ನೌಕರರಿಗೆ ಮಾಸಿಕವಾಗಿ ಆಹಾರ ಕಿಟ್ ವಿತರಣೆ
- ಕ್ರೀಡಾ ಉತ್ತೇಜನಕ್ಕಾಗಿ ಸುಸಜ್ಜಿತ ಆಟದ ಮೈದಾನ ಹಾಗೂ ಒಳಾಂಗಣ ಕ್ರೀಡಾಂಗಣ
- ಬ್ಯಾಂಕುಗಳ ಸಹಭಾಗಿತ್ವದಲ್ಲಿ ಕಂಪನಿಯ ಕಾರ್ಮಿಕರಿಗೆ ಒಂದು ಕೋಟಿ ರೂಪಾಯಿಗಳ ಅಪಘಾತ ವಿಮೆ ಯೋಜನೆ ಜಾರಿಗೊಳಿಸಲಾಗಿದೆ

ಉದ್ದೇಶಿತ ಯೋಜನೆಗಳು

- ಡಿಕ್ಲೈನ್ ಶಾಫ್ಟ್‌ನ ನಿರ್ಮಾಣ ಮಾಡುವ ಮೂಲಕ, ಹಟ್ಟಿ ಚಿನ್ನದ ಗಣಿಯ ಉತ್ತರ ಭಾಗದಲ್ಲಿ ಅನ್ವೇಷಿಸಿರುವ ಖನಿಜ ಸಂಪನ್ಮೂಲಗಳ ಗಣಿಗಾರಿಕೆಗೆ, ಅನ್ವೇಷಣಾತ್ಮಕ ಗಣಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ
- ಹೀರಾ-ಬುದ್ದಿನ್ನಿ ಚಿನ್ನದ ಖನಿಜ ಸಂಪನ್ಮೂಲಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ 2ನೇ ಹಂತದ ಗಣಿ ಅಭಿವೃದ್ಧಿಯ ಭಾಗವಾಗಿ ಮೇನ್ ಶಾಫ್ಟ್‌ನ ಆಳವನ್ನು ಹೆಚ್ಚಿಸುವ ಹಾಗೂ ಹೊಸ ಶಾಫ್ಟ್‌ನ್ನು ನಿರ್ಮಿಸುವ ಉದ್ದೇಶ ಹೊಂದಲಾಗಿದೆ
- ಬಸವಸಾಗರ ಜಲಾಶಯದಿಂದ, ಹಟ್ಟಿ ಚಿನ್ನದ ಗಣಿ ಕಂಪನಿಗೆ ಪ್ರತಿದಿನ 8 MLD ನೀರು ಸರಬರಾಜು ಮಾಡುವ ಯೋಜನೆ
- ಹಟ್ಟಿ ಚಿನ್ನದ ಗಣಿಯ ವಿದ್ಯುತ್ ಸ್ವಾವಲಂಬನೆಗಾಗಿ ಸೌರ ವಿದ್ಯುತ್ ಘಟಕ ಸ್ಥಾಪನೆಯ ಯೋಜನೆ











ಶ್ರೀ ಎಸ್.ಎಸ್. ಮಲ್ಲಿಕಾರ್ಜುನ
ಮಾನ್ಯ ಗಣಿ ಮತ್ತು ಭೂವಿಜ್ಞಾನ,
ತೋಟಗಾರಿಕೆ ಇಲಾಖೆ ಸಚಿವರು,
ಕರ್ನಾಟಕ ಸರ್ಕಾರ

ಶ್ರೀ ಜೆ.ಟಿ. ಪಾಟೀಲ,
ಮಾನ್ಯ ಅಧ್ಯಕ್ಷರು,
ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ ಹಾಗೂ
ಶಾಸಕರು ಬೀಳಗಿ ವಿಧಾನಸಭೆ ಕ್ಷೇತ್ರ





ಶ್ರೀ ಡಿ. ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ



ಡಾ. ಜಿ. ಪರಮೇಶ್ವರ
ಮಾನ್ಯ ಉಪಮುಖ್ಯಮಂತ್ರಿಗಳು

ನಾಡಿನ
ಸಮಸ್ತ ಜನತೆಗೆ ಬೆಳಕಿನ ಹಬ್ಬ

ದೀಪಾವಳಿಯ

ಹಾರ್ದಿಕ ಶುಭಾಶಯಗಳು



ಬಾಳಿನ ಕತ್ತಲು ಕರಗಲಿ, ನಗುವಿನ ದೀಪ ಬೆಳಗಲಿ

ಈ ದೀಪಾವಳಿಯನ್ನು ನಾವು ಪರಿಸರಸ್ನೇಹಿ ದೀಪಾವಳಿಯನ್ನಾಗಿ ಆಚರಿಸೋಣ. ಹಸಿರು ಪಟಾಕಿಗಳನ್ನು ಮಾತ್ರ ಬಳಸೋಣ. ನಮ್ಮ ಸಂತೋಷವು ಮತ್ತೊಬ್ಬರ ಆರೋಗ್ಯಕ್ಕೆ ತೊಂದರೆಯಾಗದಿರಲಿ.
ಈ ದೀಪಾವಳಿಯಲ್ಲಿ ಒಂದು ಸಂಕಲ್ಪ ಮಾಡೋಣ ಬೆಳಕು ಹಚ್ಚೋಣ, ಮಾಲಿನ್ಯ ತಗ್ಗಿಸೋಣ ಪರಿಸರ ಉಳಿಸೋಣ, ಭವಿಷ್ಯ ಬೆಳೆಸೋಣ.

-ಶ್ರೀ ಡಿ. ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ




ಸಮಸ್ತ ಜನತೆಗೆ
ದೀಪಾವಳಿ ಹಬ್ಬದ
ಹಾರ್ದಿಕ ಶುಭಾಶಯಗಳು
HAPPY DEEPAVALI
ಹರ್ಷವರ್ಧನ್ ಕೊಪ್ಪದ್ ಮತ್ತು ಋಷಿ ಕೊಪ್ಪದ್
ಬೆಳಕಿನ ಹಬ್ಬ ನಿಮ್ಮ ಬಾಳಿನಲ್ಲಿ ಸುಖ, ಶಾಂತಿ, ಸಮೃದ್ಧಿಯನ್ನು ತರಲಿ ಎಂದು ಹಾರೈಸುತ್ತೆವೆ


ಶಿಸ್ತು. ಶಿಕ್ಷಣ. ಸಾಧನೆ
ಶ್ರೀ ವಿನಾಯಕ ವಿದ್ಯಾಸಂಸ್ಥೆ (ರಿ).
ಸಾ॥ ಹಟ್ಟಿ ಚಿನ್ನದ ಗಣಿ ತಾ: ಲಿಂಗಸುಗೂರು, ಜಿ: ರಾಯಚೂರು
ಸಮಸ್ತ ಜನತೆಗೆ ದೀಪಾವಳಿ ಹಬ್ಬದ
ಹಾರ್ದಿಕ ಶುಭಾಶಯಗಳು
ಶುಭಾಶಯ ಕೋರುವವರು:
ನರಸಪ್ಪ ಯಾದವ್
ಅಧ್ಯಕ್ಷರು
ಶ್ರೀ ವಿನಾಯಕ ಶಿಕ್ಷಣ ಸಂಸ್ಥೆ (ರಿ).
ಶುಭಾಶಯ ಕೋರುವವರು:
ಸೈಯದ್ ಶಂಶುದ್ದೀನ್
ಕಾರ್ಯದರ್ಶಿ,
ಶ್ರೀ ವಿನಾಯಕ ಶಿಕ್ಷಣ ಸಂಸ್ಥೆ(ರಿ).
ಅಧ್ಯಕ್ಷರು/ಕಾರ್ಯದರ್ಶಿಗಳು, ಆಡಳಿತ ಮಂಡಳಿಯ ಸರ್ವಸದಸ್ಯರು,
ಉಪನ್ಯಾಸ್ಯಕರು ಹಾಗೂ ಶಿಕ್ಷಕ ವೃಂದದವರು.
-: ಶಾಲೆಯ ವಿಶೇಷತೆಗಳು :-
ನುರಿತ ಶಿಕ್ಷಕರಿಂದ ಬೋಧನೆ.
ಸುಸಜ್ಜಿತವಾದ ಗ್ರಂಥಾಲಯ.
ಸುಸಜ್ಜಿತವಾದ ಕೊಠಡಿಗಳು.
ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆ.
ವಿದ್ಯಾರ್ಥಿಗಳ ಸುರಕ್ಷತೆಗಾಗಿ ಸಿ,ಸಿ, ಕ್ಯಾಮರ
ವಿದ್ಯಾರ್ಥಿಗಳಿಗೆ ವಾಹನ ಸೌಲಭ್ಯ.
ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ಕಾಳಜಿ.
ಪ್ರತಿ ತಿಂಗಳಿಗೊಮ್ಮೆ ಪರೀಕ್ಷೆ, ಪಾಲಕರ ಸಭೆ.
ಮಗುವಿನ ಸರ್ವತೋಮುಖ
ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ.
ಅಧ್ಯಕ್ಷರರು/ಕಾರ್ಯದರ್ಶಿಗಳು, ಆಡಳಿತ ಮಂಡಳಿಯ
ಉಪನ್ಯಾಸ್ಯಕರು ಹಾಗೂ ಶಿಕ್ಷಕ ವೃಂದದವರು.


ಐಶ್ವರ್ಯ ಬಾರ್ ಆ್ಯಂಡ್ ರೆಸ್ಟೋರೆಂಟ್
ರಾಯಚೂರು ವಿವಿ ಹತ್ತಿರ ಯರಗೇರಾ, ತಾ,ಜಿ: ರಾಯಚೂರು
ನಾಡಿನ ಸಮಸ್ತ ಜನತೆಗೆ
ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು
ದೀಪದ ಬೆಳಕಿನಲ್ಲಿ ಕತ್ತಲು ದೂರ ಸರಿಯುವಂತೆ
ನಮ್ಮಲ್ಲಿರುವ ಕೋಪ, ಅಹಂ ದೂರವಾಗಲಿ
ಪ್ರೀತಿಯ ಬೆಳಕು ಹರಡಲಿ
ಶ್ರೀ ರಾಜಶೇಖರ ರಾಮಸ್ವಾಮಿ
ಮಾಲೀಕರು, ಐಶ್ವರ್ಯ ಬಾರ್‌ಆ್ಯಂಡ್ ರೆಸ್ಟೋರೆಂಟ್ ರಾಯಚೂರು ವಿವಿ ಹತ್ತರ ಯರಗೇರಾ


ಶುಭ ದೀಪಾವಳಿ
ಶುಭಾಶಯಗಳು
ಪ್ರೀತಿಯ ಜನತೆಗೆ ದೀಪಾವಳಿ ಹಬ್ಬದ
ಶುಭಾಶಯಗಳು
ದರೂರ ಬಸವರಾಜ ಪಾಟೀಲ್
ಮಾಜಿ ಸದಸ್ಯರು, ರಾಯಚೂರು ಮಹಾನಗರ ಪಾಲಿಕೆ
ಮತ್ತು ಕಾಂಗ್ರೆಸ್ ಮುಖಂಡರು


ದೀಪಾವಳಿ ಹಬ್ಬದ
ಹಾರ್ದಿಕ ಶುಭಾಶಯಗಳು
ಮಹಾಂತಯ್ಯ ಹಿರೇಮಠ
ಕೃಷಿ ಆಡಳಿತ ಅಧಿಕಾರಿ, ಗುರುಗಂಟಾ
ಮಹಾಂತಯ್ಯ ಹಿರೇಮಠ
ಕೃಷಿ ಆಡಳಿತ ಅಧಿಕಾರಿ, ಗುರುಗುಂಟಾ
ಸಮಸ್ತ ರೈತ ಬಾಂಧವರಿಗೆ ಮತ್ತು
ಕೃಷಿ ಇಲಾಖೆ ಸಿಬ್ಬಂದಿಗೆ ಶುಭ ದೀಪಾವಳಿ!


ದೀಪಾವಳಿ ಹಬ್ಬದ ಶುಭಾಶಯಗಳು
ಬೆಳಕಿನ ಹಬ್ಬ ದೀಪಾವಳಿ ನಿಮಗೆ,
ನಿಮ್ಮ ಕುಟುಂಬಕ್ಕೆ ಆರೋಗ್ಯ,
ಐಶ್ವರ್ಯ ನೀಡಲಿ ಸಮಸ್ತ ಜನತೆಗೆ
ದೀಪಾವಳಿ ಹಬ್ಬದ ಹಾರ್ದಿಕ
ಶುಭಾಶಯಗಳು
ವಿಶ್ವನಾಥ ಪಾಟೀಲ್ ಅಲ್ಕೂರು


ಸಮಸ್ತ ವೀರಶೈವ ಲಿಂಗಾಯತ ಬಾಂಧವರಿಗೆ
ಹಾಗೂ ರಾಯಚೂರು ಜಿಲ್ಲೆಯ ಜನತೆಗೆ
ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು!
ಚಂದ್ರಶೇಖರ ಪಾಟೀಲ್ ಮಿರ್ಜಾಪುರ
ಅಧ್ಯಕ್ಷರು - ಅಖಿಲ ಭಾರತ ವೀರಶೈವ ಲಿಂಗಾಯತ
ಮಹಾಸಭಾ, ರಾಯಚೂರು ಜಿಲ್ಲೆ


ಶುಭ ದೀಪಾವಳಿ ಶುಭಾಶಯಗಳು
ಅಲ್-ಶಿಫಾ ಆಸ್ಪತ್ರೆ
AL-SHIFA HOSPITAL
ಆಸ್ಪತ್ರೆ ಸಮಯ
ಹಟ್ಟಿ
ಸೋಮವಾರ ರಿಂದ ಶನಿವಾರ:
ಬೆಳಿಗ್ಗೆ: 7:30 ರಿಂದ 9:00
ಸಂಜೆ: 5:30 ರಿಂದ 9:30
ಭಾನುವಾರ:
ಬೆಳಿಗ್ಗೆ: 10:00 ರಿಂದ 3:00
ಸಂಜೆ: 5:30 ರಿಂದ 9:30
ದೀಪಾವಳಿಯು ನಿಮ್ಮೆಲ್ಲರ
ಬಾಲ್ಲರ ಬಾಳಿನಲ್ಲಿ ಬೆಳಕು
ಬೆಳಕು ಮತ್ತು ಆರೋಗ್ಯವನ್ನು
ತುಂಬಲಿ ಎಂದು ಆಶಿಸುತ್ತೇವೆ.
AL-SHIFA HOSPITAL Hatti. (Open all days)


ಶುಭ ದೀಪಾವಳಿ ಹಬ್ಬದ
ಹಾರ್ದಿಕ ಶುಭಾಶಯಗಳು
ಬಸವರಾಜ ಚಲುವಾದಿ
ಗ್ರಾಮ ಆಡಳಿತ ಅಧಿಕಾರಿ (ವಿ.ಎ.ಒ), ಹಟ್ಟಿ
ಬೆಳಕಿನ ಹಬ್ಬವು ನಿಮ್ಮೆಲ್ಲರ ಬಾಳಿನಲ್ಲಿ
ಸುಖ, ಶಾಂತಿ, ಸಮೃದ್ಧಿ ಮತ್ತು
ಆರೋಗ್ಯವನ್ನು ತರಲಿ
ಎಂದು ಹಾರೈಸುತ್ತೆನೆ.


ದೀಪಾವಳಿ ಹಬ್ಬದ
ಶುಭಾಶಯಗಳು
ಗ್ರಾಮ ಆಡಳಿತ ಅಧಿಕಾರಿ
ಗುರುಗುಂಟಾ
ಮಲ್ಲುಕಾರ್ಜುನ
ಕ್ಯತನಾಳ
ಈ ದೀಪಾವಳಿಯು ನಿಮ್ಮೆಲ್ಲರ
ಬಾಳಿನಲ್ಲಿ ಸುಖ, ಶಾಂತಿ, ಮತ್ತು
ಸಮೃದ್ಧಿಯನ್ನು ತರಲಿ
ಎಂದು ಹಾರೈಸುತ್ತೇವೆ.


ದೀಪಾವಳಿ ಹಬ್ಬದ
ಹಾರ್ದಿಕ ಶುಭಾಶಯಗಳು
ರಾಯಪ್ಪ ಎಚ್. ಬಳಗನೂರು
ಮತ್ತು ಬಳಗ
ಬೆಳಕಿನ ಹಬ್ಬವು ನಿಮ್ಮೆಲ್ಲರ ಬಾಳಿನಲ್ಲಿ ಸುಖ, ಶಾಂತಿ
ಮತ್ತು ಸಮೃದ್ಧಿಯನ್ನು ತರಲಿ ಎಂದು ಹಾರೈಸುತ್ತೆವೆ


ಈ ಹಬ್ಬವು ನಮ್ಮ ನಿಮ್ಮೆಲ್ಲರ ಬದುಕಿನಲ್ಲಿ ಸಂತೋಷ, ಶಾಂತಿ, ಯಶಸ್ಸು ಮತ್ತು
ಸಮೃದ್ಧಿಯನ್ನು ತರಲಿ ಎಂದು ಹಾರೈಸಲಾಗುತ್ತದೆ. ಈ ದೀಪಾವಳಿಯು ಕಷ್ಟಗಳೆಂಬ
ಶತ್ರುಗಳನ್ನು ದೂರ ಮಾಡಿ, ಜೀವನದಲ್ಲಿ ಹೊಸ ಬೆಳಕು ಮತ್ತು ಭರವಸೆಯನ್ನು ತರಲಿ.
ಸಮಸ್ತ ನಾಡಿನ ಜನತೆಗೆ
ಕನ್ನಡ ರಾಜ್ಯೋತ್ಸವದ ಹಾಗೂ ದೀಪಾವಳಿ ಹಬ್ಬದ
ಹಾರ್ದಿಕ ಶುಭಾಶಯಗಳು
ಮೌನುದ್ದೀನ್ ಬೂದಿನಾಳ್
ರಾಜ್ಯ ಸಮಿತಿ ಸದಸ್ಯರು,ಕರ್ನಾಟಕ ರಾಜ್ಯ
ಪದಾಧ್ /ಪಿಂಜಾರ ಸಂಘ (ರಿ) ಶಿವಮೊಗ್ಗ


ಸಮಸ್ತ ಜನತೆಗೆ
ದೀಪಾವಳಿ ಹಬ್ಬದ
ಶುಭಾಶಯಗಳು
ಡಾ ನಂದಿತಾ ಎಮ್ ಎನ್.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ
ನಂದಿತಾ ಮಸಳ್ಳಿ
Health is Wealth


ಸಮಸ್ತ ನಾಡಿನ ಜನತೆಗೆ
ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು
ಪುರಸಭೆ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ
ಪುರಸಭೆ ಕಾರ್ಯಾಲಯ ಮುದಗಲ್
ಶ್ರೀ ಜಿ ಕುಮಾರ ನಾಯಕ
ಸಂಸದರು ರಾಯಚೂರು ಲೋಕಸಭಾಕ್ಷೇತ್ರ
ಶ್ರೀ ಮಾನಪ್ಪ ಡಿ ವಜ್ಜಲ್
ಶಾಸಕರು ಆಂಗಸುಗೂರು ವಿಧಾನಸಭಾಕ್ಷೇತ್ರ
ಶ್ರೀ ಶರಣಗೌಡ ಪಾಟೀಲ್ ಬಯ್ಯಾಪೂರ
ವಿಧಾನ ಪರಿಷತ್ ಸದಸ್ಯರು ರಾಯಚೂರು-ಕೊಪ್ಪಳ
ದೀಪಾವಳಿ
ಹಬ್ಬದ
ಶುಭಾಶಯಗಳು
Happy Diwali
May the divine light of Diwali bring peace and prosperity to your life.
ಶ್ರೀ ನಾಗೇಂದ್ರ ಬಾಬು ಕುಮಾರ
ಸಹಾಯಕ ಆಯುಕ್ತರು ಹಾಗೂ ಆಡಳಿತಾಧಿಕಾರಿಗಳು
ಪುರಸಭೆ ಮುದಗಲ್ಲ್
ಶ್ರೀ ಪ್ರವೀಣ್ ಕುಮಾರ್ ಬೋಗಾರ
ಮುಖ್ಯಾಧಿಕಾರಿಗಳು
ಪುರಸಭೆ ಮುದಗಲ್
ಪುರಸಭೆ ಕಾರ್ಯಾಲಯ ಮುದಗಲ್


ಪುರಸಭೆ ಮಾನವಿ
ತಾಲೂಕ: ಮಾನವಿ ಜಿಲ್ಲಾ: ರಾಯಚೂರು
ಕರ್ನಾಟಕ ಸರಕಾರ
ಪುರಸಭೆ ಕಾರ್ಯಾಲಯ
ಮಾನವಿ 584128. ತಾ॥ ಮಾನವಿ ಜೆ॥ರಾಯಚೂರು.
ಮಾನ್ವಿ ಪಟ್ಟಣದ
ಸಮಸ್ತ ಜನರಿಗೆ
ದೀಪಾವಳಿ ಹಬ್ಬದ
ಶುಭಾಶಯಗಳು
ನರಸಿಂಹ (ಕೆ.ಎಂ.ಎಸ್.
ಕಛೇರಿ ವ್ಯವಸ್ಥಾಪಕರು ಪುರಸಭೆ ಮಾನವಿ
ಶ್ರೀ ಹಂಪಣ್ಣ ಸಜ್ಜನ್
ಪುರಸಭೆ ಆಡಳಿತಾಧಿಕಾರಿಗಳು ಮಾನ್ವಿ
ಹಾಗೂ ರಾಯಚೂರ ಸಹಾಯಕ
ಉಪ ವಿಭಾಗಾಧಿಕಾರಿಗಳು
ಶ್ರೀ ಪರಶುರಾಮ
ಬಿ. ದೇವಮಾನೆ
ಮುಖ್ಯಾಧಿಕಾರಿಗಳು
KMAS Grade-2
ಆಡಳಿತ ಮಂಡಳಿ ಹಾಗೂ ಸಿಬ್ಬಂದಿವರ್ಗ, ಪುರಸಭೆ ಮಾನವಿ

ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು









ಬೆಳಕಿನ ಹಬ್ಬ ದೀಪಾವಳಿ

ದೀಪಜ್ಯೋತಿಃ ಪರಬ್ರಹ್ಮ
ದೀಪಜ್ಯೋತಿರ್ಜನಾರ್ದನಃ
ದೀಪೋ ಹರತು ಮೇ ಪಾಪಂ
ದೀಪಜ್ಯೋತಿರ್ನಮೋಸ್ತುತೇ
ದೀಪಾವಳಿ ಹಬ್ಬದ ಶುಭಾಶಯಗಳು

ಮಣ್ಣಿನಿಂದ ಮಾಡಿದ ದೀಪಗಳಿಂದ
ಎಣ್ಣೆಯಲ್ಲಿ ಅದ್ದಿದ ಹತ್ತಿಯ ಬತ್ತಿಯಿಂದ
ಕತ್ತಲೆಯ ಮೇಲೆ ಬೆಳಕಿನ ವಿಜಯ ಸಂಕೇತದ
ಹಬ್ಬವನ್ನು ಆಚರಿಸೋಣ ದೀಪಗಳನ್ನು
ಬೆಳಗುವುದರಿಂದ

ಮಿನುಗುವ ದೀಪಗಳು, ಬೆರಗುಗೊಳಿಸುವ
ಪಟಾಕಿಗಳ ಹಬ್ಬ
ಕತ್ತಲೆಯ ಮೇಲೆ ಪ್ರೀತಿಯನ್ನು ಎತ್ತಿ ಹಿಡಿಯುವ
ಹಬ್ಬ
ಸುತ್ತಲಿನ ಎಲ್ಲರೊಂದಿಗೆ ಸಂತೋಷವನ್ನು
ಹಂಚಿಕೊಳ್ಳುವ ಹಬ್ಬ
ಎಲ್ಲರ ಮನೆ, ಮನದಲ್ಲೂ ಬೆಳಕನ್ನು ಮೂಡಿಸುವ
ಹಬ್ಬ

ದೀಪಗಳಂತೆ ನಮ್ಮ ಜೀವನವು ಸದಾ ಬೆಳಗುತ್ತಿರಲಿ
ದೀಪಗಳ ಬೆಳಕಿನಲ್ಲಿ ಕತ್ತಲು ಕರಗುವಂತೆ ಕಷ್ಟಗಳು
ಕರಗಲಿ
ದೀಪದ ಹೊಳಪಿನಂತೆ ಜೀವನಪೂರ್ತಿ ಸಂತೋಷ
ತುಂಬಿರಲಿ
ಸಮೃದ್ಧಿ ಶಾಂತಿ ಆರೋಗ್ಯದ ಬೆಳಕನ್ನು ಮೂಡಿಸಲಿ

ಜೀವಮಾನವಿಡೀ ಉಳಿಯುವ ಕ್ಷಣಗಳನ್ನು
ಸೃಷ್ಟಿಸೋಣ
ದೀಪದ ಬೆಳಕಿನಲ್ಲಿ ಪ್ರೀತಿಯ ದೀಪ ಬೆಳಗಿಸೋಣ
ಸವಿನುಡಿಯ ತೈಲದ ಜೊತೆ ಬಾಳಿನ ಪ್ರಣತಿ
ಬೆಳಗೋಣ
ನಿಸ್ವಾರ್ಥದ ಜ್ಯೋತಿಯ ಬೆಳಕು ಮೂಡಿಸೋಣ

ಕು. ಜ್ಯೋತಿ ಆನಂದ ಚಂದುಕರ
ಬಾಗಲಕೋಟ



ತುಂಗ ಬಿಂಬ

S.S.R.B. EDUCATION & CHARITABLE TRUST (R)

ಸನ್‌ರೈಸ್ ಪದವಿ ಮಹಾವಿದ್ಯಾಲಯ

SUNRISE DEGREE COLLEGE

RAICHUR & MASKI

BA
B.COM
M.COM

ದೀಪಾವಳಿ

ಹಬ್ಬದ ಹಾರ್ದಿಕ ಶುಭಾಶಯಗಳು



ಸನ್‌ರೈಸ್ ಡಿಗ್ರಿ ಕಾಲೇಜಿನ
ಎಲ್ಲವರ್ಗದ ವಿದ್ಯಾರ್ಥಿಗಳು,
ಶಿಕ್ಷಕರು ಹಾಗೂ ಸಿಬ್ಬಂದಿಗಳಿಗೆ
ದೀಪಾವಳಿ ಹಬ್ಬದ ಹಾರ್ದಿಕ
ಶುಭಾಶಯಗಳು. ಈ ಬೆಳಕು
ಮತ್ತು ಸಂತೋಷದ ಹಬ್ಬ ನಿಮ್ಮ
ಜೀವನದಲ್ಲಿ ಪ್ರಗತಿ, ಶಾಂತಿ
ಮತ್ತು ಯಶಸ್ಸನ್ನು ತರಲಿ

SunRise

#1-8-140/1, 2ND FLOOR NANDI TOWER, BEHIND WEST POLICE STATION, TANK BUND ROAD, RAICHUR-584101

ದೀಪಾವಳಿ ಹಬ್ಬದ
ಶುಭಾಶಯಗಳು



ಶರಣಬಸವ ಮೇಟಿ

ಪ್ರಥಮ ದರ್ಜೆ ಗುತ್ತಿಗೆದಾರರು
ಲಿಂಗಸುಗೂರು

ಪಟ್ಟಣ ಪಂಚಾಯತ ಸಿರವಾರ ಮುಖ್ಯಾಧಿಕಾರಿ ಹಾಗೂ
ಪಟ್ಟಣ ಪಂಚಾಯತ ಸಿಬ್ಬಂದಿ ವರ್ಗದವರಿಂದ ಹಾಗೂ
ಪಟ್ಟಣ ಪಂಚಾಯತ ಸದಸ್ಯರ ವತಿಯಿಂದ
ಸಮಸ್ತ ನಾಡಿನ ಜನತೆಗೆ
ದೀಪಾವಳಿ ಹಬ್ಬದ
ಶುಭಾಶಯಗಳು



ಶ್ರೀ ಹಾಜಿಚೌದ್ರಿ
ಅಧ್ಯಕ್ಷರು ಪ.ಪಂ, ಸಿರವಾರ

ಶ್ರೀಮತಿ ಲಕ್ಷ್ಮೀ ಆದೆಪ್ಪ
ಉಪಾಧ್ಯಕ್ಷರು ಪ.ಪಂ, ಸಿರವಾರ


ಶ್ರೀ ಜಗನ್ನಾಥ ಜೋಷಿ
ಪ.ಪಂ ಮುಖ್ಯಾಧಿಕಾರಿ ಸಿರವಾರ


ದೀಪಾವಳಿ ಹಬ್ಬದ
ಹಾರ್ದಿಕ ಶುಭಾಶಯಗಳು
ಭೀಮಣ್ಣ ಗೋಸಲ್
ನಗರ ಘಟಕದ ಅಧ್ಯಕ್ಷರು, ದೇವದುರ್ಗ
ಜನತಾದಳ (ಜಾತ್ಯತೀತ) ಪಕ್ಷ
ಬೆಳಕಿನ ಹಬ್ಬ ದೀಪಾವಳಿ ನಿಮ್ಮೆಲ್ಲರ ಬಾಳಿನಲ್ಲಿ ಸುಖ,
ಶಾಂತಿ, ಸಮೃದ್ಧಿಯನ್ನು ತರಲಿ ಎಂದು ಹಾರೈಸುವ.


ನಾಡಿನ ಸಮಸ್ತ ಜನತೆಗೆ
ದೀಪಾವಳಿ ಹಬ್ಬದ
ಶುಭಾಶಯಗಳು
ಬೆಟ್ಟಪ್ಪ ಕಸ್ತೂರಿ ಮತ್ತು ಅತ್ತನೂರು ಕಲಾ ತಂಡದ
ಬೆಟ್ಟಪ್ಪ ಕಸ್ತೂರಿ ಅತ್ತನೂರು ಕಲಾ ತಂಡದಿಂದ ನಾಡಿನ ಜನತೆಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು


ಶುಭ ದೀಪಾವಳಿ
ಶುಭಾಶಯಗಳು
ರವೀಂದ್ರ ಜಲ್ಲಾರ್
ರಾಯಚೂರು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ
...ಸಮಸ್ತ ಜನತೆಗೆ ದೀಪಾವಳಿಯ
ಹಾರ್ದಿಕ ಶುಭಾಶಯಗಳು


ಶುಭ ದೀಪಾವಳಿ
ಹಾರ್ದಿಕ ಶುಭಾಶಯಗಳು
ತಲಕಾಯಿ ಮಾರೆಪ್ಪ
ಕೆಪಿಸಿಸಿ ಹಿಂದುಳಿದ ವಿಭಾಗ ರಾಜ್ಯ ಉಪಾಧ್ಯಕ್ಷರು
ಗಂಗಾಮತ ಸಮಾಜದ ಯುವ ಮುಖಂಡರು


ಶುಭ
ದೀಪಾವಳಿ
ಶುಭಾಶಯಗಳು
ಡಾ.ಶರಣಬಸವ
ಪಾಟೀಲ್ ಜೋಳದಹೆಡ್ಡಿ
ಬಿಜೆಪಿ ಮಂಡಲ ಅಧ್ಯಕ್ಷರು
ದೇವದುರ್ಗ


ದೀಪಾವಳಿ ಹಬ್ಬದ
ಹಾರ್ದಿಕ ಶುಭಾಶಯಗಳು
ನರಸಪ್ಪ ಅಶಪೂರ್
ಅಧ್ಯಕ್ಷರು, ಜಿಲ್ಲಾ ಜೆಡಿಎಸ್ ಪರಿಶಿಷ್ಟ ಜಾತಿ ವಿಭಾಗ


ಬೆಳಕಿನ ಹಬ್ಬ
ದೀಪಾವಳಿಯ
ಶುಭಾಶಯಗಳು!
ದೀಪಾವಳಿಯ ಹಾರ್ದಿಕ
ಶುಭಾಶಯಗಳು
ಲೋಕ ಜನಶಕ್ತಿ ಪಕ್ಷದ (ಕೀ.ಸೆ) ಜಿಲ್ಲಾಧ್ಯಕ್ಷ
ಬಂಗಿ ಮುನಿರೆಡ್ಡಿ
ನಮ್ಮ ಕಡೆಯಿಂದ ಎಲ್ಲರಿಗೂ ಶುಭ ಹಾರೈಕೆಗಳು


ರಾಷ್ಟ್ರೀಯ ಮಹಿಳಾ ಕಾಂಗ್ರೆಸ್
ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ
ಶ್ರೀದೇವಿ ರಾಜಶೇಖರ ನಾಯಕ
ಮಹಿಳೆಯರ ಸಶಕ್ತೀಕರಣ ಮತ್ತು ಸಾಮಾಜಿಕ
ದೀಪಾವಳಿ ಹಬ್ಬದ ಶುಭಾಶಯಗಳು
ನಮ್ಮ ಕಾಂಗ್ರೆಸ್, ನಮ್ಮ ಹಕ್ಕು.

SKE PARAMEDICAL COLLEGE

ಎಸ್‌ಕೆಇ ಪ್ಯಾರಾಮೆಡಿಕಲ್ ಕಾಲೇಜಿನಿಂದ ದೀಪಾವಳಿ ಹಾರೈಕೆ

ಎಸ್ ಕೆ ಇ ಪ್ಯಾರಾಮೆಡಿಕಲ್ ಕಾಲೇಜು ಕುಟುಂಬದಿಂದ ದೇಶದಾದ್ಯಂತ ಇರುವ ಎಲ್ಲಾ ವಿದ್ಯಾರ್ಥಿಗಳು, ಅಧ್ಯಾಪಕರು, ಪೋಷಕರು ಮತ್ತು ಸ್ನೇಹಿತರಿಗೆ ದೀಪಾವಳಿಯ ಹಾರ್ದಿಕ ಶುಭಾಶಯಗಳು.

ಅಂಧಕಾರದ ಮೇಲೆ ಬೆಳಕಿನ ಜಯ, ಅಜ್ಞಾನದ ಮೇಲೆ ಜ್ಞಾನದ ಜಯ ಮತ್ತು ದುಷ್ಟದ ಮೇಲೆ ಸತ್ಪವೃತ್ತಿಯ ಜಯವನ್ನು ಸಾರುವ ದೀಪಾವಳಿ ಹಬ್ಬದ ಶುಭ ಸಂದರ್ಭದಲ್ಲಿ ನಿಮ್ಮೆಲ್ಲರಿಗೂ ಸಂತೋಷ, ಆರೋಗ್ಯ ಮತ್ತು ಸಮೃದ್ಧಿಯ ಬೆಳಕು ತುಂಬಲಿ. ಪರಸ್ಪರ ಪ್ರೀತಿ, ಸಹಕಾರ, ಮಾನವೀಯತೆ ಮತ್ತು ಸಮಾಜ ಸೇವೆಯ ಮೌಲ್ಯಗಳನ್ನು ಬೆಳೆಸುವ ದೀಪಾವಳಿ ಹಬ್ಬವು ನಿಮ್ಮ ಬದುಕಿಗೆ ಹೊಸ ಚೈತನ್ಯ ಮತ್ತು ಉತ್ತೇಜನ ನೀಡಲಿ.



ದೀಪಾವಳಿಯ ಈ ಹಬ್ಬದ ಸಂಭ್ರಮ ನಿಮ್ಮ ಮನೆಮಂದಿಗೆ
ಆರೋಗ್ಯದ ಬೆಳಕು,
ಸಂತೋಷದ ಕಂಕಣ,
ಸೌಹಾರ್ದತೆ ಮತ್ತು ಯಶಸ್ಸಿ ನ ದಾರಿ ಬೆಳಗಲಿ ಎಂದು ಹಾರೈಸುತ್ತೇವೆ.

-ಎಸ್ ಕೆ ಇ ಪ್ಯಾರಾಮೆಡಿಕಲ್ ಕಾಲೇಜು







ಸ್ವದೇಶಿ ಉತ್ಪನ್ನ ಬಳಸಿ, ಸ್ವದೇಶವನ್ನು ಬಲಪಡಿಸಿ

ವೈವಿಧ್ಯಮಯ ಸಂಸ್ಕೃತಿ ಹೊಂದಿದ ನಮ್ಮ ಭಾರತದಲ್ಲಿ ವಿವಿಧ ಸಮುದಾಯದ ಜನರು ನೆಲೆಸಿದ್ದಾರೆ. ಪ್ರತಿ ಸಮುದಾಯದವರು ತಮ್ಮದೇ ಹಬ್ಬ ಹರಿದಿನಗಳನ್ನು ಆಚರಿಸುತ್ತಾರೆ. ಹಾಗಾಗಿ ದೇಶದ ಒಂದಲ್ಲಾ ಒಂದು ಕಡೆ ಪ್ರತಿದಿನ ಒಂದಾದರೂ ಹಬ್ಬವಿದ್ದೇ ಇರುತ್ತದೆ. ಹಿಂದೂ ಸಂಪ್ರದಾಯಗಳಲ್ಲಿ ಹಬ್ಬಗಳಿಗೆ ಬಹಳ ಮಹತ್ವವಿದ್ದು, ಯುಗಾದಿಯಿಂದ ಹಿಡಿದು ಶಿವರಾತ್ರಿಯವರೆಗೆ ಹಬ್ಬಗಳ ಪರ್ವವೇ ಇರುತ್ತದೆ.

ಭಾರತದಲ್ಲಿ ಹಬ್ಬಗಳೆಂದರೆ ಕೇವಲ ಶುಭಾಶಯಗಳನ್ನು ವಿನಿಮಯ ಮಾಡುವುದಲ್ಲ, ಬದಲಿಗೆ ಹೊಸ ಉಡುಪುಗಳ ಖರೀದಿ, ಗೃಹಾಲಂಕಾರ, ಚಿನ್ನ, ಬೆಳ್ಳಿ, ಆಹಾರ ಪದಾರ್ಥಗಳು, ತಿಂಡಿ ತಿನಿಸುಗಳು, ಗೃಹೋಪಕರಣಗಳ ಖರೀದಿ, ಉಡುಗೊರೆ ವಿನಿಮಯ, ದಾನ ಧರ್ಮ, ದೈವಿಕ ಕಾರ್ಯಗಳು ಹೀಗೆ ಪಟ್ಟಿಯು ಬೆಳೆಯುತ್ತಲೇ ಹೋಗುತ್ತದೆ. ಹಬ್ಬಗಳ ಸಂದರ್ಭದಲ್ಲಿ ಮಧ್ಯಮವರ್ಗದ ಜನರಲ್ಲಿ ಅನೇಕ ಸಲ ಆದಾಯಕ್ಕಿಂತ ಖರ್ಚು ಹೆಚ್ಚಾಗಿರುತ್ತದೆ. ಈ ಹಬ್ಬಗಳನ್ನೇ ಬಂಡವಾಳ ಮಾಡಿಕೊಂಡಿರುವ ಅನೇಕ ವ್ಯಾಪಾರಸ್ಥರು, ವಿನಾಯಿತಿ ದರದ ಮಾರಾಟ, ಉಚಿತ ಉಡುಗೊರೆಯ ನೆಪದಲ್ಲಿ ಜನರನ್ನು ಆಕರ್ಷಿಸಿ, ವಸ್ತುಗಳನ್ನು ಖರೀದಿಸುವಂತೆ ಪ್ರಚೋದಿಸುತ್ತಾರೆ. ಅದರಲ್ಲೂ ವಿಶೇಷವಾಗಿ ದೀಪಾವಳಿ ಹಬ್ಬ ಬಂದಿತೆಂದರೆ ಖರೀದಯ ಭರಾಟೆ ಅತ್ಯಧಿಕವಾಗಿರುತ್ತದೆ.

ಇಂದಿನ ವ್ಯಾಪಾರ ವಹಿವಾಟುಗಳು ಹಿಂದಿನಂತಿಲ್ಲ. ಈಗ ಭಾರತದಲ್ಲಿ ಹಬ್ಬ ಶುರುವಾಗುವ ಮುನ್ನವೇ ವಿದೇಶಗಳಲ್ಲಿ ಇಲ್ಲಿ ಮಾರಾಟವಾಗುವ ವಸ್ತುಗಳ ತಯಾರಿ ಮತ್ತು ಮಾರಾಟ ಆನ್ಲೈನ್ ನಲ್ಲಿ ಸದ್ದು ಮಾಡುತ್ತದೆ. ಕಡಿಮೆ ಬೆಲೆಗೆ, ಸಿಗುವ ಪ್ಲಾಸ್ಟಿಕ್ ಹಣತೆ, ಆಕಾಶಬುಟ್ಟಿ, ಸಿಡಿಮದ್ದು, ಪಟಾಕಿಗಳು ಅಲಂಕಾರಿಕ ವಸ್ತುಗಳಿಂದ ಹಿಡಿದು, ವೈವಿಧ್ಯಮಯ ವಸ್ತ್ರಗಳು ಜನರನ್ನು ಸೆಳೆಯುತ್ತವೆ. ಹಬ್ಬಗಳು ನಮ್ಮದಾದರೂ ವ್ಯಾಪಾರ ವಹಿವಾಟು, ಆರ್ಥಿಕ ಗಳಿಕೆ ವಿದೇಶಿಯರು ಮಾಡಿಕೊಳ್ಳುತ್ತಿರುವುದು ಕಹಿ ಸತ್ಯವಾಗಿದೆಯಲ್ಲವೇ?

ನಮ್ಮ ದೇಶದ ಅಭಿವೃದ್ಧಿ, ಆರ್ಥಿಕ ಸಮತೋಲನತೆ ಕಾಪಾಡುವುದು ನಮ್ಮ ನಿಮ್ಮ ಹೊಣೆಯಲ್ಲವೇ? ಇಲ್ಲೇ ತಯಾರಾಗುವ ಸ್ವದೇಶಿ ವಸ್ತುಗಳನ್ನು ಸ್ವಲ್ಪ ದುಬಾರಿಯೆನಿಸಿದರೂ ನಾವೇಕೆ ಖರೀದಿಸುವ ಮನಸ್ಸು ಮಾಡುತ್ತಿಲ್ಲ? ಎಂಬುದರ ಬಗ್ಗೆ ಚಿಂತನ ಮಂಥನ ಮಾಡಬೇಕಾಗಿದೆ. ವಿದೇಶಿ ತ್ಯಾಜ್ಯಗಳನ್ನು, ಹಣ ಕೊಟ್ಟು ಖರೀದಿಸಿ, ಹಬ್ಬ ಮಾಡುವುದರೊಂದಿಗೆ ದೇಶದ ಆರ್ಥಿಕತೆಗೆ ಮಾತ್ರವಲ್ಲ, ಸ್ಥಳೀಯ ವ್ಯಾಪಾರಿಗಳಿಗೆ ಮತ್ತು ನಮ್ಮ ಪರಿಸರಕ್ಕೆ ಹಾನಿ ಮಾಡುತ್ತಿದ್ದೇವಲ್ಲವೇ? ವಿದೇಶಿ ಬ್ರ್ಯಾಂಡ್, ವಿದೇಶಿ ವಸ್ತುಗಳ ವ್ಯಾಮೋಹವನ್ನು ಕಡಿಮೆ ಮಾಡಿ, ಸ್ವದೇಶಿ ಉತ್ಪನ್ನಗಳತ್ತ ಚಿತ್ತ ಹರಿಸುವುದು ಭವಿಷ್ಯದ ದೃಷ್ಟಿಯಿಂದ ಒಳ್ಳಯದು. ನಮ್ಮ ದೇಶದಲ್ಲಿಯೇ ಉತ್ಪಾದನೆಯಾಗುವ ವಸ್ತುಗಳನ್ನು ಬಳಸುವ ಅಭ್ಯಾಸವನ್ನು ನಾವುಗಳು ಬೆಳೆಸಿಕೊಳ್ಳಬೇಕು. ಆಗಲೇ ದೇಶದ ವಿತ್ತೀಯ ನಿಲುವು ಬಲವಾಗುತ್ತದೆ. ದೇಶ ಸದೃಢವಾದರೆ, ನಾವುಗಳು ಸುರಕ್ಷಿತವಾಗಿರಬಹುದಲ್ಲವೇ?

ಸ್ವದೇಶಿ ಉತ್ಪನ್ನಗಳನ್ನು ಬಳಸುವುದರಿಂದ ಇಲ್ಲಿ ಕೈಗಾರಿಕೆಗಳು ಅಭಿವೃದ್ಧಿ ಹೊಂದುತ್ತವೆ. ಪರಿಣಾಮವಾಗಿ ಸಣ್ಣ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು ಮತ್ತು ಸ್ಥಳೀಯ ವ್ಯಾಪಾರಿಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ಅನೇಕ ಜನರಿಗೆ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ. ರೈತರು, ನೇಕಾರರು, ಕುಶಲಕರ್ಮಿಗಳು ಹಾಗೂ ಸಣ್ಣ ಉದ್ಯಮಿಗಳು ಆರ್ಥಿಕವಾಗಿ ಸಬಲರಾಗಲು ಸಹಾಯವಾಗುತ್ತದೆ. ಇಲ್ಲಿಯ ವಸ್ತುಗಳ ಬಳಕೆ ಮತ್ತು ಖರೀದಿಯಿಂದ ದೇಶದ ಹಣ ದೇಶದಲ್ಲಿಯೇ ಉಳಿಯುತ್ತದೆ. ಉತ್ಪಾದನೆ ಅಧಿಕವಾಗಿ, ಆರ್ಥಿಕ ಸ್ವಾವಲಂಬನೆ ಸಾಧ್ಯವಾಗುತ್ತದೆ. ಸ್ಥಳೀಯವಾಗಿ ತಯಾರಿಸಿದ ವಸ್ತುಗಳನ್ನು ಬಳಸುವುದರಿಂದ ನೆಲಮೂಲದ ಸಂಸ್ಕೃತಿ, ಕಲೆ ಮತ್ತು ಪರಂಪರೆಯನ್ನು ಉಳಿಸಿಕೊಳ್ಳಬಹುದು. ಜೊತೆಗೆ, ಸ್ಥಳೀಯ ಉತ್ಪನ್ನಗಳನ್ನು ಆಯ್ಕೆ ಮಾಡುವುದರಿಂದ ಕೆಲವು ಸಂದರ್ಭಗಳಲ್ಲಿ ಸಾಗಣೆ ವೆಚ್ಚ ಮತ್ತು ಪರಿಸರದ ಮೇಲಿನ ಹೊರೆ ಕೂಡ ಕಡಿಮೆಯಾಗುತ್ತದೆಯಲ್ಲವೇ?

ಸ್ಥಳೀಯವಾಗಿ ತಯಾರಿಸಿದ ಉಡುಪುಗಳು, ಗೃಹಪಯೋಗಿ ವಸ್ತುಗಳು, ಎಲೆಕ್ಟ್ರಾನಿಕ್ಸ್ ವಸ್ತುಗಳು, ಆಹಾರ ಪದಾರ್ಥಗಳು, ದಿನ ಬಳಕೆ ವಸ್ತುಗಳು, ಕರಕುಶಲ ವಸ್ತುಗಳು ಅಲ್ಲದೇ ಸ್ಥಳೀಯವಾಗಿ ತಯಾರಾಗುವ ಉತ್ಪನ್ನಗಳಿಗೆ ಮೊದಲ ಆದ್ಯತೆ ನೀಡುವುದರೊಂದಿಗೆ, ಸ್ವದೇಶಿ ವಸ್ತುಗಳ ಗುಣಮಟ್ಟವನ್ನು ಗುರುತಿಸಿ, ಅವುಗಳ ಬಳಕೆಯ ಬಗ್ಗೆ ಎಲ್ಲರಿಗೂ ಅರಿವು ಮೂಡಿಸೋಣವೇ? ಸ್ಥಳೀಯ ವಸ್ತುಗಳ ಗುಣಮಟ್ಟ, ಬೆಲೆ ಮತ್ತು ಉಪಯುಕ್ತತೆ ಬಗ್ಗೆ ಜಾಗೃತಿ ಮೂಡಿಸುವುದೇ ನಮ್ಮ ಹಬ್ಬದಾಚರಣೆಯ ಮುಖ್ಯ ಧ್ಯೇಯವಾಗಲಿಯೆಂದು ಕೋರುತ್ತ ದೀಪಾವಳಿಯ ಶುಭಾಶಯಗಳನ್ನು ಕೋರೋಣ.

ಸ್ವದೇಶಿ ವಸ್ತುಗಳ ಬಳಕೆ ನಮಗೆ ಅಭ್ಯಾಸವಾದರೆ, ಅದೇ ನಾವು ನಮ್ಮ ದೇಶದ ಅಭಿವೃದ್ಧಿಗೆ ನೀಡುವ ಕೊಡುಗೆಯಾಗುತ್ತದೆ. ಸ್ವದೇಶಿ ಉತ್ಪನ್ನ ಬಳಸಿ, ಸ್ವದೇಶಿಗರನ್ನು ಬೆಳೆಸೋಣ ಎಂಬ ಮನೋಭಾವವನ್ನು ನಾವೆಲ್ಲರೂ ಬೆಳೆಸಿಕೊಳ್ಳೋಣ. ಹಬ್ಬ ನಮ್ಮದು, ಖರ್ಚು ನಮ್ಮದು. ಹಾಗಾಗಿ ಆದಾಯವು ನಮ್ಮವರಿಗೆ ಸೇರಬೇಕಲ್ಲವೇ? ಏನಂತೀರ?



ಪುಷ್ಪಲತಾ ಕೆ.ಎಸ್. ಹೆಗಡೆ

ದೀಪಾವಳಿ

ಮನೆಯಂಗಳದಿ ಹಣತೆಯ ಸಾಲು,
ಮನದಂಗಳದಿ ಬೆಳಕಿನ ಕೋಲು,
ಕತ್ತಲೆಯ ಮಡಿಲಲಿ ಮೂಡಿದೆ ಇಂದು
ಆಶಾಕಿರಣದ ಹೊಂಗೋಲು!!

ಮಣ್ಣಿನ ಹಣತೆಯ ಮೌನದೊಳಗೆ
ಸಾವಿರ ಭಾವಗಳ ಬೆಳಕು,
ಮನೆಯ ಮನಗಳ ಬೆಸೆಯುವ ಹಬ್ಬವಿದು,
ಪ್ರೀತಿಯ ಹೊನಲು!!

ಬಣ್ಣದ ರಂಗೋಲಿ ಬಾಗಿಲಲಿ
ಅರಳಲಿ ಸಂತಸದ ಹೂವಾಗಿ,
ಸಿಹಿಯ ಸವಿಯಲಿ ಸಂಬಂಧಗಳು
ಬೆಸೆಯಲಿ ಮಧುರವಾಗಿ!!

ಒಡೆದು ಹೋಗಲಿ ಮನದೊಳಗಿನ
ಅಹಂಕಾರದ ಗೋಡೆಗಳು,
ಬೆಸೆದು ಬರಲಿ ಪ್ರೀತಿಯಿಂದ
ಮುರಿದ ಮನದ ಕೊಂಡಿಗಳು!!

ದೀಪದ ಬೆಳಕಲಿ ಕೇವಲ
ಮನೆ ಮಾತ್ರ ಬೆಳಗದಿರಲಿ,
ಪ್ರತಿಯೊಂದು ಹೃದಯದೊಳಗೂ
ಮಾನವೀಯತೆ ಅರಳಲಿ!!

ದ್ವೇಷದ ಕತ್ತಲೆಯ ಅಳಿಸಿ,
ಪ್ರೀತಿಯ ಹಣತೆ ಹಚ್ಚೋಣ,
ಸ್ನೇಹದ ಬೆಳಕಿನ ಹಬ್ಬವನ್ನು
ನಿತ್ಯವೂ
ಆಚರಿಸೋಣ!!



ಸುಜಾತಾ ಮಣ್ಣಿಕೇರಿ
(ಸುಮ)
ನಾಗಪುರ,
ಮಹಾರಾಷ್ಟ್ರ.

ದೀಪದ ಮಹತ್ವ

ಓಂ ಅಸತೋ ಮಾ ಸದ್ಗಮಯ,
ತಮಸೋ ಮಾ ಜ್ಯೋತಿರ್ಗಮಯ,
ಮೃತ್ಯೋರ್ಮಾ ಅಮೃತಂ ಗಮಯ।
ಓಂ ಶಾಂತಿಃ ಶಾಂತಿಃ ಶಾಂತಿಃ॥

ಕತ್ತಲೆಯನ್ನು ಹಿಂದೆ ಬಿಟ್ಟು ಬೆಳಕಿನೆಡೆಗೆ ಸಾಗಬೇಕು. ತಾವು ಪಡೆದ ಬೆಳಕನ್ನು ಎಲ್ಲರೊಂದಿಗೂ ಹಂಚಿಕೊಂಡು ಬದುಕಬೇಕೆಂಬ ಸದ್ಭಾವವನ್ನು ಹೊಂದಬೇಕು. ಸಮಸ್ತ ಜೀವಿಗಳ ಹಿತದೃಷ್ಟಿಯಿಂದ ಜೀವನವನ್ನು ರೂಪಿಸಿಕೊಳ್ಳಬೇಕು.

ಕತ್ತಲೆ ಋಣಾತ್ಮಕವಾದರೆ, ಬೆಳಕು ಧನಾತ್ಮಕ. ದೀಪ ಎಂದಾಕ್ಷಣ ಎಲ್ಲರಿಗೂ ನೆನಪಾಗುವುದು ಬೆಳಕು. ಬೆಳಕು ಜೀವನದ ಅಂಧಕಾರವನ್ನು ತೊಡೆದುಹಾಕುತ್ತದೆ. ಬೆಳಕು ಎಂದರೆ ತಿಳಿವಳಿಕೆ, ಜ್ಞಾನದ ಸಂಕೇತ. ಬೆಳಕಿನ ಕುರಿತು ಯೋಚಿಸಿದಾಗ ನಮ್ಮ ಮನಸ್ಸಿನಲ್ಲಿ ಮೂಡುವುದೇ ದೀಪ.

ದೀಪಕ್ಕೊಂದು ಅಗಾಧವಾದ ಸಾಂಕೇತಿಕ ಶಕ್ತಿಯಿದೆ. ಬೆಳಗುವ ದೀಪವು ಮನಸ್ಸಿನ ಕತ್ತಲೆಯನ್ನು ದೂರಗೊಳಿಸಿ, ಅಜ್ಞಾನವನ್ನು ನಿವಾರಿಸುವ ಜ್ಞಾನದ ಸಂಕೇತವಾಗಿದೆ. ಮನಸ್ಸಿನ ಕಲ್ಮಶಗಳನ್ನು ದೂರ ಸರಿಸಿ ಶಾಂತಿ, ನೆಮ್ಮದಿ ಮೂಡಿಸುವ ಪ್ರೇರಣೆಯನ್ನು ದೀಪ ನೀಡುತ್ತದೆ.

ದೀಪ ಎಂದರೆ ಶಾಂತಿ, ದೀಪ ಎಂದರೆ ಸಮೃದ್ಧಿ, ದೀಪ ಎಂದರೆ ಬೆಳಕು, ದೀಪ ಎಂದರೆ ಆರೋಗ್ಯ, ದೀಪ ಎಂದರೆ ಸಂಪತ್ತು, ದೀಪ ಎಂದರೆ ಪ್ರಖರತೆ. ಹೀಗೆ ದೀಪವು ಜೀವನದ ಸಕಾರಾತ್ಮಕ ಬೆಳವಣಿಗೆಯ ಪ್ರತೀಕವಾಗಿದೆ. ಇಂತಹ ದೀಪವನ್ನು ಪ್ರತಿದಿನ ಬೆಳಗಿಸುವುದು ನಮ್ಮ ಜೀವನದಲ್ಲಿ ಸಂತೋಷ, ನೆಮ್ಮದಿ ಹಾಗೂ ಶಾಂತಿಯನ್ನು ಮೂಡಿಸುವ ಒಂದು ಸುಂದರ ಸಂಪ್ರದಾಯವಾಗಿದೆ.

ದೇವರ ಧ್ಯಾನ ಮತ್ತು ಪ್ರಾರ್ಥನೆಯಲ್ಲಿ ಅಪಾರವಾದ ಆಧ್ಯಾತ್ಮಿಕ ಶಕ್ತಿಯಿದೆ ಎಂಬ ನಂಬಿಕೆಯಿದೆ. ಪ್ರಾರ್ಥನೆಯ ಮೂಲಕ ಮನಸ್ಸಿಗೆ ಶಾಂತಿ, ನೆಮ್ಮದಿ ಹಾಗೂ ಸಕಾರಾತ್ಮಕ ಚಿಂತನೆಗಳನ್ನು ಪಡೆಯಬಹುದು. ಮನೆಯಲ್ಲಿ ದೀಪ ಹಚ್ಚುವುದರಿಂದ ಧನಾತ್ಮಕ ಭಾವನೆಗಳು ಮೂಡುತ್ತವೆ ಎಂಬುದು ಭಾರತೀಯರ ಸಾಂಪ್ರದಾಯಿಕ ನಂಬಿಕೆಯಾಗಿದೆ.

ಭಾರತೀಯ ಸಂಸ್ಕೃತಿಯಲ್ಲಿ ದೀಪಕ್ಕೆ ವಿಶೇಷ ಮಹತ್ವವಿದೆ. ಯಾವುದೇ ಶುಭಕಾರ್ಯ, ಧಾರ್ಮಿಕ ಕಾರ್ಯಕ್ರಮ ಅಥವಾ ಪೂಜಾ ಕೈಂಕರ್ಯಗಳನ್ನು ಆರಂಭಿಸುವಾಗ ದೀಪ ಬೆಳಗಿಸುವುದು ನಮ್ಮ ಸಂಪ್ರದಾಯ. ದೀಪವು ಶುಭಾರಂಭ, ಜ್ಞಾನ, ಶಾಂತಿ ಹಾಗೂ ಮಂಗಳದ ಸಂಕೇತವಾಗಿದೆ. ಮನೆಯಲ್ಲಿ ದೀಪ ಬೆಳಗಿಸುವುದರಿಂದ ಶಾಂತಿಮಯ ವಾತಾವರಣ ನಿರ್ಮಾಣವಾಗುತ್ತದೆ ಎಂಬ ಭಾವನೆ ನಮ್ಮ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿದೆ.

ಹಲವಾರು ದೇವಾಲಯಗಳಲ್ಲಿ ನಡೆಯುವ ಲಕ್ಷದೀಪೋತ್ಸವಗಳು ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ. ಕಾರ್ತಿಕ ಮಾಸದ ಕಗ್ಗತ್ತಲಿನಲ್ಲಿ ಸಾವಿರಾರು ದೀಪಗಳ ಬೆಳಕು ಮನಸ್ಸಿಗೆ ಮುದ ನೀಡುತ್ತದೆ. ಮೈ ನಡುಗಿಸುವ ಚಳಿಯ ನಡುವೆ ಬೆಳಗುವ ದೀಪಗಳ ಸಾಲುಗಳು ಭಕ್ತಿಭಾವವನ್ನು ಉದ್ದೀಪನಗೊಳಿಸುತ್ತವೆ.

ತಂಗಾಳಿಗೆ ದೀಪದ ಜ್ವಾಲೆಗಳು ಅಲುಗಾಡಿದರೂ ಆರದೆ ಉರಿಯುವ ಅವುಗಳ ಸಾಮರ್ಥ್ಯ ನಮ್ಮ ಬದುಕಿಗೆ ಮಹತ್ವದ ಪಾಠ ಕಲಿಸುತ್ತದೆ. ಜೀವನದಲ್ಲಿ ಎಂತಹ ಬಿರುಗಾಳಿ ಬೀಸಿದರೂ ಧೈರ್ಯ, ಆತ್ಮವಿಶ್ವಾಸ ಹಾಗೂ ದೃಢಸಂಕಲ್ಪದಿಂದ ಅಚಲವಾಗಿ ನಿಲ್ಲಬೇಕೆಂಬ ಸಂದೇಶವನ್ನು ದೀಪ ನೀಡುತ್ತದೆ.

ದೀಪವನ್ನು ತದೇಕಚಿತ್ತದಿಂದ ನೋಡುವ ಮೂಲಕ ಮನಸ್ಸಿನ ಏಕಾಗ್ರತೆ ಮತ್ತು ಶಾಂತಿಯನ್ನು ಪಡೆಯಲು ಪ್ರಯತ್ನಿಸುವ ಯೋಗಾಭ್ಯಾಸವೇ ತ್ರಾಟಕ.

ತ್ರಾಟಕವು ಯೋಗಪರಂಪರೆಯಲ್ಲಿ ಉಲ್ಲೇಖವಾಗಿರುವ ಒಂದು ಧ್ಯಾನ ವಿಧಾನವಾಗಿದೆ. ಈ ಅಭ್ಯಾಸದಲ್ಲಿ ವ್ಯಕ್ತಿಯು ಶಾಂತವಾದ ವಾತಾವರಣದಲ್ಲಿ ಒಂದು ನಿರ್ದಿಷ್ಟ ಸ್ಥಳದಲ್ಲಿ ದೀಪ ಅಥವಾ ಮೇಣದಬತ್ತಿಯನ್ನು ಬೆಳಗಿಸಿ, ಅದರ ಜ್ವಾಲೆಯ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸುತ್ತಾನೆ.

ಸಾಮಾನ್ಯವಾಗಿ ಪದ್ಮಾಸನ ಅಥವಾ ಸುಖಾಸನದಲ್ಲಿ ಆರಾಮವಾಗಿ ಕುಳಿತು, ದೇಹವನ್ನು ಸ್ಥಿರವಾಗಿರಿಸಿಕೊಂಡು ನಿಧಾನವಾಗಿ ದೃಷ್ಟಿಯನ್ನು ದೀಪದ ಜ್ವಾಲೆಯ ಕಡೆಗೆ ಕೇಂದ್ರೀಕರಿಸಲಾಗುತ್ತದೆ. ಈ ಸಂದರ್ಭದಲ್ಲಿ ಉಸಿರಾಟ ಸಹಜವಾಗಿರಬೇಕು. ಮನಸ್ಸನ್ನು ಚಂಚಲಗೊಳಿಸುವ ಆಲೋಚನೆಗಳಿಂದ ದೂರವಿದ್ದು, ಏಕಾಗ್ರತೆಯನ್ನು ಸಾಧಿಸಲು ಪ್ರಯತ್ನಿಸಲಾಗುತ್ತದೆ.

ದೀಪದ ಜ್ವಾಲೆಯನ್ನು ಗಮನಿಸುವಾಗ ಕಣ್ಣುಗಳಿಗೆ ಆಯಾಸವಾಗದಂತೆ ಎಚ್ಚರಿಕೆ ವಹಿಸುವುದು ಮುಖ್ಯ. ಕಣ್ಣುಗಳಲ್ಲಿ ಉರಿ, ನೀರು ಬರುವುದು ಅಥವಾ ಅಸ್ವಸ್ಥತೆ ಉಂಟಾದರೆ ಅಭ್ಯಾಸವನ್ನು ನಿಲ್ಲಿಸಿ ವಿಶ್ರಾಂತಿ ಪಡೆಯಬೇಕು. ಕಣ್ಣು ಮಿಟುಕಿಸದೆ ಬಲವಂತವಾಗಿ ನೋಡುವುದು ಸೂಕ್ತವಲ್ಲ.

ಅಭ್ಯಾಸದ ನಂತರ ನಿಧಾನವಾಗಿ ಕಣ್ಣುಗಳನ್ನು ಮುಚ್ಚಿ, ಮನಸ್ಸನ್ನು ಶಾಂತಗೊಳಿಸಿಕೊಂಡು ಧ್ಯಾನದಲ್ಲಿ ತೊಡಗಿಸಿಕೊಳ್ಳಬಹುದು. ಈ ರೀತಿಯ ಧ್ಯಾನಾಭ್ಯಾಸವು ಕೆಲವರಿಗೆ ಮನಸ್ಸನ್ನು ಶಾಂತಗೊಳಿಸಿಕೊಳ್ಳಲು ಹಾಗೂ ಏಕಾಗ್ರತೆಯನ್ನು ಬೆಳೆಸಿಕೊಳ್ಳಲು ಸಹಾಯಕವಾಗಬಹುದು.

ತ್ರಾಟಕದಿಂದ ದೃಷ್ಟಿದೋಷಗಳು ನಿವಾರಣೆಯಾಗುತ್ತವೆ ಅಥವಾ ಕಣ್ಣಿನ ನರಗಳು ಬಲಿಷ್ಠವಾಗುತ್ತವೆ ಎಂಬುದಕ್ಕೆ ದೃಢವಾದ ವೈಜ್ಞಾನಿಕ ಸಾಕ್ಷ್ಯಗಳು ಸೀಮಿತವಾಗಿವೆ. ಆದ್ದರಿಂದ ಇದನ್ನು ಕಣ್ಣಿನ ಸಮಸ್ಯೆಗಳಿಗೆ ಚಿಕಿತ್ಸೆಯ ಪರ್ಯಾಯವಾಗಿ ಪರಿಗಣಿಸಬಾರದು. ಕಣ್ಣಿನ ತೊಂದರೆಗಳು ಅಥವಾ ಇತರ ಆರೋಗ್ಯ ಸಮಸ್ಯೆಗಳಿರುವವರು ತಜ್ಞರ ಸಲಹೆಯೊಂದಿಗೆ ಅಭ್ಯಾಸ ಮಾಡುವುದು ಸೂಕ್ತ.

ದೀಪದ ಮಹತ್ವವನ್ನು ಸಾರುವ ಮತ್ತೊಂದು ಸುಂದರ ಶ್ಲೋಕ ಹೀಗಿದೆ:

ದೀಪಜ್ಯೋತಿಃ ಪರಬ್ರಹ್ಮ,
ದೀಪಜ್ಯೋತಿರ್ಜನಾರ್ದನಃ।
ದೀಪೋ ಹರತು ಮೇ ಪಾಪಂ,
ಸಂಧ್ಯಾದೀಪ ನಮೋಽಸ್ತು ತೇ॥

ಭಾರತೀಯ ಸಂಸ್ಕೃತಿಯಲ್ಲಿ ದೀಪವನ್ನು ಪರಬ್ರಹ್ಮ ಹಾಗೂ ಪರಂಜ್ಯೋತಿಯ ಸ್ವರೂಪವೆಂದು ಪರಿಗಣಿಸಲಾಗುತ್ತದೆ. ದೀಪದ ಬೆಳಕು ಅಜ್ಞಾನವನ್ನು ದೂರಮಾಡಿ ಜ್ಞಾನದೆಡೆಗೆ ಕರೆದೊಯ್ಯುತ್ತದೆ ಎಂಬುದು ಈ ಶ್ಲೋಕದ ಆಧ್ಯಾತ್ಮಿಕ ಆಶಯವಾಗಿದೆ.

ಅದೇ ರೀತಿ ದೀಪದ ಮಹತ್ವವನ್ನು ಸಾರುವ ಮತ್ತೊಂದು ಶ್ಲೋಕ ಹೀಗಿದೆ:

ಶುಭಂ ಕರೋತಿ ಕಲ್ಯಾಣಂ,
ಆರೋಗ್ಯಂ ಧನಸಂಪದಾಮ್।
ಶತ್ರುಬುದ್ಧಿವಿನಾಶಾಯ,
ದೀಪಜ್ಯೋತಿರ್ನಮೋಽಸ್ತು ತೇ॥

ದೀಪವು ಎಲ್ಲರಿಗೂ ಶುಭವನ್ನು ತರಲಿ, ಕಲ್ಯಾಣವನ್ನುಂಟುಮಾಡಲಿ, ಆರೋಗ್ಯ ಹಾಗೂ ಸಮೃದ್ಧಿಯನ್ನು ನೀಡಲಿ, ಶತ್ರುತ್ವದ ಭಾವನೆಗಳನ್ನು ದೂರಮಾಡಲಿ ಎಂಬ ಪ್ರಾರ್ಥನೆ ಈ ಶ್ಲೋಕದಲ್ಲಿದೆ.

ದೀಪವು ಕೇವಲ ಕತ್ತಲೆಯನ್ನು ಹೋಗಲಾಡಿಸುವ ಸಾಧನವಲ್ಲ, ಅದು ಮಾನವನ ಅಂತರಂಗವನ್ನು ಬೆಳಗಿಸುವ ಜ್ಞಾನಜ್ಯೋತಿಯ ಸಂಕೇತವೂ ಹೌದು. ದೀಪವು ತನ್ನನ್ನು ತಾನು ಉರಿಸಿಕೊಂಡು ಇತರರಿಗೆ ಬೆಳಕು ನೀಡುವಂತೆ, ಮನುಷ್ಯನೂ ತನ್ನ ಜ್ಞಾನ, ಪ್ರೀತಿ, ಕರುಣೆ ಮತ್ತು ಒಳ್ಳೆಯ ಗುಣಗಳನ್ನು ಇತರರೊಂದಿಗೆ ಹಂಚಿಕೊಳ್ಳಬೇಕು.

ಒಂದು ದೀಪದಿಂದ ಮತ್ತೊಂದು ದೀಪವನ್ನು ಬೆಳಗಿಸಿದಾಗ ಮೊದಲ ದೀಪದ ಬೆಳಕು ಕಡಿಮೆಯಾಗುವುದಿಲ್ಲ. ಬದಲಾಗಿ ಬೆಳಕು ಮತ್ತಷ್ಟು ವಿಸ್ತರಿಸುತ್ತದೆ. ಅದೇ ರೀತಿ ನಾವು ಹಂಚುವ ಜ್ಞಾನ, ಪ್ರೀತಿ, ವಿಶ್ವಾಸ ಮತ್ತು ಭರವಸೆಗಳು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರಬಲ್ಲವು.

ಆದ್ದರಿಂದ ನಮ್ಮ ಬದುಕಿನಲ್ಲಿ ಪ್ರೀತಿ, ವಿಶ್ವಾಸ, ಭರವಸೆ ಹಾಗೂ ಮಾನವೀಯತೆಯ ದೀಪಗಳನ್ನು ಬೆಳಗಿಸೋಣ. ಅಜ್ಞಾನದ ಕತ್ತಲೆಯನ್ನು ತೊಡೆದುಹಾಕಿ ಜ್ಞಾನದ ಜ್ಯೋತಿಯನ್ನು ಪ್ರಜ್ವಲಿಸೋಣ. ನಮ್ಮ ಬದುಕಿನೊಂದಿಗೆ ಇತರರ ಬದುಕನ್ನೂ ಬೆಳಗಿಸುವ ಸಂಕಲ್ಪ ಮಾಡೋಣ.

ವೀಣಾ ಹೇಮಂತ್ ಗೌಡ ಪಾಟೀಲ್
ಮುಂಡರಗಿ, ಗದಗ.

ಬದುಕಿನ ದಾರಿ

ಮರೆಯಬೇಡ ನೀ ಬದುಕಲು ಕರುಣೆ ತುಂಬಿದ
ಕಡಲಲಿ ಬದುಕಬೇಡ ನೀ ಗರ್ವ ತುಂಬಿದ
ಅಂಧಕಾರದ ಮಡಿಲಲ್ಲಿ....

ಮಾಡಬೇಡ ನೀ ದುರ್ಜನರ ಸಂಗವ
ತೊರೆಯಬೇಡ ನೀ ಸಜ್ಜನರ ಸಾಮಿಪ್ಯವ
ಕಲಿಯಬೇಡ ನೀ ದುಶ್ಚಟಗಳ ಸಹವಾಸವ
ಕಲಿತುಕೋ ನೀ ವೇದಗಳ ಸಾರವ.....

ಕೊಡಬೇಡ ನೀ ಬಂಧುಗಳಿಗೆ ಸಾಲವ
ಕಾಡಬೇಡ ನೀ ಸ್ನೇಹಿತರ ಮನವ
ಮಾತನಾಡಬೇಡ ನಿನ್ನ ಸಮಯ ಬಾರದೆ ಇದ್ದಾಗ
ಸುಮ್ಮನಿರಬೇಡ ನಿನ್ನ ಸಮಯ ಬಂದಾಗ.....

ಬಯಸಬೇಡ ನೀ ಬೇರೆಯವರ ಸಂಪತ್ತನ್ನ
ಬಿಡಬೇಡ ನೀ ನಿನ್ನ ಹೆತ್ತವರ ಬಾಧ್ಯತೆಗಳನ್ನ
ನಂಬಬೇಡ ನೀ ಆ ಪರಿಚಿತರ ಮಾತನ್ನ
ಕಳೆಯಬೇಡ ನಮ್ಮ ನಾಡಿನ ಸಭ್ಯತೆ
ಸಂಸ್ಕೃತಿಯನ್ನ......

ಎಂ. ಸುನಿತಾ ಪುಂಡಿ
ಗ್ರಂಥಪಾಲಕಿ ರಾಯಚೂರು.

ಬಸ್ಸಿನ ಪ್ರಯಾಣ

ಹೋಗುವವು ಬಸ್ಸುಗಳು
ಜನರಿಲ್ಲದಿದ್ದಾಗ ಸಾಲಾಗಿ
ಬರುವುದಿಲ್ಲ ಒಂದು ಬಸ್ಸು
ಜನ ನಿಂತಾಗ ಸಾಲಾಗಿ....

ಪರದಾಡುತ್ತಿರುವರು ಪ್ರಯಾಣಿಕರು
ಹಿಡಿಯಲು ಸೀಟನ್ನ ಯೋಚಿಸುತ್ತಿರುವರು
ಚಾಲಕರು ಹೇಗೆ ತಲುಪಿಸುವುದು
ಈಬಸ್ಸನ್ನ.....

ಕೇಳುವರು ಕಂಡಕ್ಟರ್ ಪ್ರಯಾಣದ ಊರನ್ನ
ತೋರಿಸುವರು ಇವರು
ತಮ್ಮ ಆಧಾರ್ ಕಾರ್ಡನ್ನ.....

ಸೀಟಿಗಾಗಿ ತೆಗೆದುಕೊಳ್ಳುತ್ತಾರೆ ಬೇರೆಯವರ
ಜೊತೆ ಜಗಳವನ್ನ ಮರೆಯುತ್ತಾರೆ ಎಲ್ಲರೂ
ಒಂದೇ ಎಂಬ ಮಾನವೀಯತೆಯನ್ನ....

ಅರಿತರೆ ಇವರು ಸಾರಿಗೆ ಸಂಪರ್ಕ ಇಲಾಖೆಯವರ
ಜವಾಬ್ದಾರಿಯನ್ನ ಮಾಡಬಹುದೇ ಎಲ್ಲರೂ
ಸುಖಕರ ಪ್ರಯಾಣವನ್ನ...

ಎಂ. ಸುನಿತಾ ಪುಂಡಿ
ಗ್ರಂಥಪಾಲಕಿ ರಾಯಚೂರು.

ರಾಯಚೂರು ಮತ್ತು ಕೊಪ್ಪಳ ಜಿಲ್ಲಾ, ರಾಯಚೂರು

ಪ್ರಧಾನ ಕಾರ್ಯಲಯ, ಗಂಜ್ ರಸ್ತೆ-ರಾಯಚೂರು

ಬ್ಯಾಂಕಿನ ಗ್ರಾಹಕರಿಗೆ ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು

ರಾಯಚೂರು ಮತ್ತು ಕೊಪ್ಪಳ ಅವಳಿ ಜಿಲ್ಲೆಗಳ ರೈತರ ಹಾಗೂ ಗ್ರಾಹಕರ ಜೀವನಾಡಿಯಾಗಿ 107 ವರ್ಷಗಳ ಸಾರ್ಥಕ ಸೇವೆ ನೀಡಿದ್ದು, ಸರದಿ ಸಾಲಿನ ಲೆಕ್ಕ ಪರಿಶೋಧನಾ ವರದಿಯಂತೆ ಬ್ಯಾಂಕಿಗೆ "A" ಶ್ರೇಣಿ ಲಬಿಸಿರುತ್ತದೆ. ಬ್ಯಾಂಕಿನಲ್ಲಿ QR Code, RTGS/NEFT, KCC Rupay Card, Debit card,IMPS, UPI (Phone Pay, Google Pay), Micro ATM`s, ರೈತ ಸದಸ್ಯರಿಗೆ "ಯಶಸ್ವಿನಿ" ಆರೋಗ್ಯ ವಿಮಾ ಯೋಜನೆ, PMJJBY, PMSBY, PMFBY, ಸೌಲಭ್ಯ ಇರುತ್ತದೆ.

ದಿನಾಂಕ 31-03-2026ಕ್ಕೆ ಅವಳಿ ಜಿಲ್ಲೆಯ 28 ಶಾಖೆಗಳು ಹಾಗೂ ಹಾಗೂ 255 ಪ್ಯಾಕ್ಸ್‌ಗಳ ಮೂಲಕ 118989 ರೈತ ಸದಸ್ಯರುಗಳಿಗೆ ರೂ:759.49 ಕೋಟಿಗಳ ಕೃಷಿ ಸಾಲ ಹಾಗೂ ರೂ:324.87 ಕೋಟಿಗಳ ಕೃಷಿಯೇತರ ಸಾಲದೊಂದಿಗೆ ಒಟ್ಟು ರೂ.1084.36 ಕೋಟಿಗಳ ಹೊರಬಾಕಿ ಹೊಂದಿದ್ದು, ರೂ.1802.01 ಕೋಟಿ ದುಡಿಯುವ ಬಂಡವಾಳ, ರೂ.1503.01 ಕೋಟಿ ಠೇವಣಿ ಹಾಗೂ ಒಟ್ಟು ಲಾಭ ರೂ:21.20 ಕೋಟಿ (ನಿವ್ವಳ ಲಾಭ ರೂ.11.02 ಕೋಟಿ)ದೊಂದಿಗೆ ಗ್ರಾಹಕರ ವಿಶ್ವಾಸ ಗಳಿಸಿದ ಹೆಮ್ಮೆಯ ಸಹಕಾರಿ ಬ್ಯಾಂಕು ಆಗಿದೆ.

UPI Powered by BHIM Pyanolle | RuPay DEBIT CARD | RTGS/ NEFT | Micro ATM | PMJJBY/PMSBY/PMFBY | Yashaswini

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ
ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿ ವರ್ಗದವರು.



ಬೆಳಕಿನ ಹಬ್ಬ ದೀಪಾವಳಿ
ಹಬ್ಬದ ಹಾರ್ದಿಕ ಶುಭಾಶಯಗಳು

ಜಿಲ್ಲೆಯ ಸಮಸ್ತ ಜನತೆಗೆ ರೈತ ಬಾಂಧವರಿಗೆ
ಈ ದೀಪಾವಳಿ ಹಬ್ಬವು ಸುಖ-ಶಾಂತಿ-ನೆಮ್ಮದಿ
ನೀಡಲೆಂದು ಶುಭ ಹಾರೈಸುತ್ತೇವೆ.



ಎ.ಪಾಪರೆಡ್ಡಿ
ಅಧ್ಯಕ್ಷರು



ಮಾರಂ ತಿಪ್ಪಣ್ಣ
ಕಾರ್ಯದರ್ಶಿ



ಸಾವಿತ್ರಿ ಪುರುಷೋತ್ತಮ್
ಖಜಾಂಚಿ

ಶುಭಕೋರುವವರು :~ ಹಾಗೂ ಸರ್ವ ಸದಸ್ಯರು ರೈಸ್ ಮಿಲ್ಲರ್ಸ್ ಅಸೋಸಿಯೇಶನ್

ರಾಯಚೂರು ರೈಸ್ ಮಿಲ್ಲರ್ಸ್ ಅಸೋಸಿಯೇಶನ್ (ರಿ)
Raichur Rice Miller's Association (R)
Shop No. 12-10-51/3 Maram Complex, Lingasugur Road, Raichur-584 102

ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು



ಡಾ. ಗುರುರಾಜ ಸುಂಕದ

ಕುಲಪತಿಗಳು

















ಕರ್ನಾಟಕ ರಾಜ್ಯದ ಮೂರನೇ ಕೃಷಿ ವಿಶ್ವವಿದ್ಯಾಲಯವಾಗಿ 22ನೇ ನವೆಂಬರ್ 2008 ರಂದು ಸ್ಥಾಪಿತವಾಗಿದ್ದು ಕಲ್ಯಾಣ ಕರ್ನಾಟಕ ಭಾಗದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳು ಈ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಟ್ಟಿವೆ.

ಕೃಷಿ ಮತ್ತು ಕೃಷಿತಾಂತ್ರಿಕತೆ ವಿಷಯಗಳಲ್ಲಿ ನಾಲ್ಕು ವರ್ಷಗಳ ಸ್ನಾತಕ ಪದವಿ ಕಾರ್ಯಕ್ರಮ ಹೊಂದಿದ್ದು, ರಾಯಚೂರು, ಭೀಮರಾಯನಗುಡಿ, ಕಲಬುರಗಿ, ಗಂಗಾವತಿ ಹಾಗೂ ಹಗರಿ ಮಹಾವಿದ್ಯಾಲಯಗಳ ಮೂಲಕ ಬಿ. ಎಸ್.ಸಿ (ಆನರ್ಸ್) ಕೃಷಿ ಸ್ನಾತಕ ಪದವಿ ಕಾರ್ಯಕ್ರಮಗಳು ನಡೆಯುತ್ತಿದ್ದು ಒಟ್ಟು 417 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ ಮತ್ತು ರಾಯಚೂರಿನಲ್ಲಿರುವ ಕೃಷಿ ತಾಂತ್ರಿಕ ಮಹಾವಿದ್ಯಾಲಯದಡಿಯ ಬಿ.ಟೆಕ್. (ಕೃಷಿ ತಾಂತ್ರಿಕತೆ) ಸ್ನಾತಕ ಪದವಿಗೆ ಒಟ್ಟು 87 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ.

ರಾಯಚೂರು ಅವರಣದಲ್ಲಿ ಹದಿನೈದು ವಿಶಿಷ್ಟ ವಿಷಯಗಳಲ್ಲಿನ ಸ್ನಾತಕೋತ್ತರ ಪದವಿ ಕಾರ್ಯಕ್ರಮದ ಮೂಲಕ 165 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಮತ್ತು ಹನ್ನೊಂದು ವಿಶಿಷ್ಟ ವಿಷಯಗಳಲ್ಲಿ ಡಾಕ್ಟರೇಟ್ ಪದವಿಗೆ 30 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ. ಬೀದರನಲ್ಲಿ ಎರಡು ವರ್ಷಗಳ "ಕೃಷಿ ಡಿಪ್ಲೋಮಾ" ಕೋರ್ಸಿನಡಿ ಒಟ್ಟು 35 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ.

- ಕಲ್ಯಾಣ ಕರ್ನಾಟಕ ಭಾಗದ ಪ್ರಮುಖ ಬೆಳೆಗಳಾದ ಭತ್ತ, ತೊಗರಿ, ಕಡಲೆ, ಸೂರ್ಯಕಾಂತಿ, ಮುಸುಕಿನಜೋಳ, ಮೆಣಸಿನಕಾಯಿ, ಹತ್ತಿ ಹಾಗೂ ಇನ್ನಿತರ ಬೆಳೆಗಳಲ್ಲಿ ಹೊಸ ತಳಿಗಳ ಅಭಿವೃದ್ಧಿಪಡಿಸುವಿಕೆ.
- ಕೂರಿಗೆ ಭತ್ತ ಬೇಸಾಯ ಕ್ರಮಗಳ ಸಂಶೋಧನೆಯ ಹಾಗೂ ಫಲಿತಾಂಶಗಳ ಪರಿಶೀಲನೆ
- ಸಮಗ್ರ ಕೃಷಿ ಪದ್ಧತಿಗಳ ಅನುಷ್ಠಾನದಲ್ಲಿ ಗಣನೀಯ ಒತ್ತಾಸೆ.
- ಜನಪ್ರಿಯ ನಾಟಿ ಪದ್ಧತಿಯಲ್ಲಿ ತೊಗರಿ ಬೆಳೆ ವಿಸ್ತರಣೆಗೆ ಇಂಬು ನೀಡುವುದು.
- ಕೀಟ–ರೋಗಗಳ ಗುರುತಿಸುವ ಇ–ಸ್ಯಾಪ್ (ಜ–ಖಂಕ) ತಂತ್ರಜ್ಞಾನದ ಪ್ರಸರಣೆಗೆ ಆದ್ಯತೆ.
- ಕೀಟನಾಶಕಗಳ ಅವಶೇಷ ಹಾಗೂ ಆಹಾರ ಗುಣ ವಿಶ್ಲೇಷಣೆಗೆ ಆದ್ಯತೆ
- ನಿಖರ ಕೃಷಿ ಮತ್ತು ಲೇಜರ್ ಸಮಪಾತಳಿ ತಂತ್ರಜ್ಞಾನಗಳ ವಿಸ್ತೃತ ಕ್ಷೇತ್ರ ಪ್ರಯೋಗಗಳು.
- ಕೃಷಿಯಲ್ಲಿ ನ್ಯಾನೋ ತಂತ್ರಜ್ಞಾನಗಳ ಬಳಕೆ.
- ರಾಷ್ಟ್ರೀಯ ಖ್ಯಾತಿಯ ಬೀಜೋತ್ಪಾದನಾ ಚಟುವಟಿಕೆಗಳು. ಏಳು ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ಆರು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳ ಮೂಲಕ ರೈತಸ್ನೇಹಿ ಸಂಶೋಧಿತ ತಂತ್ರಜ್ಞಾನಗಳ ಫಲಿತಾಂಶಗಳ ಪರಿಶೀಲನೆ, ಪ್ರಾತ್ಯಕ್ಷಿಕೆ, ತರಬೇತಿ ಹಾಗೂ ಸಾಧಕ–ಭಾದಕಗಳ ವಿನಿಮಯ.
- ಕೃಷಿ ಅಭಿವೃದ್ಧಿಪ್ರೇರಿತ ಕಾರ್ಯಕ್ರಮಗಳ ಕುರಿತು ರೈತ ಸಮುದಾಯಗಳೊಂದಿಗೆ ವ್ಯಾಪಕ ವಿನಿಮಯ ವೇದಿಕೆಯಾಗಿ ಕೃಷಿ ಮೇಳಗಳ ಆಯೋಜನೆ.
- ಪ್ರತಿ ಜಿಲ್ಲೆಯ ಶ್ರೇಷ್ಠ ಕೃಷಿಕ ಮತ್ತು ಕೃಷಿಮಹಿಳೆಯರಿಗೆ ಪುರಸ್ಕಾರ ಪ್ರಶಸ್ತಿ ಪ್ರದಾನ.
- ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನದಂದು ಉತ್ಕೃಷ್ಠ ರೈತಬಾಂಧವರಿಗೆ "ಕೃಷಿರತ್ನ" ಪ್ರಶಸ್ತಿ ಪ್ರದಾನ.
- ಯುವ ಪೀಳಿಗೆಯನ್ನು ಮತ್ತೆ ಕೃಷಿಯತ್ತ ಆಕರ್ಷಿಸಲು "ನಮ್ಮ ಹೆಮ್ಮೆಯ ಯುವ ರೈತ" ಕಾರ್ಯಕ್ರಮಗಳ ಆಯೋಜನೆ.
- ಪ್ರತಿ ಶನಿವಾರದಂದು ರೈತ–ಗ್ರಾಹಕರ ಸೇತುವೆಯಾಗಿರುವ "ರೈತ ಸಂತೆ" ಆಯೋಜನೆ.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಲಿಂಗಸುಗೂರು ರಸ್ತೆ, ರಾಯಚೂರು–584104. ದೂ : 08532–220440, 220189(140/145)
www.uasraichur.karnataka.gov.in

ರಾಯಚೂರು ಮಹಾನಗರ ಪಾಲಿಕೆ



ಶ್ರೀ. ಜುಬಿನ್ ಮೊಹಪಾತ್ರ, ಐ.ಎ.ಎಸ್.
ಆಯುಕ್ತರು

Shri. Jubin Mohapatra, IAS,
Commissioner

ಸಮಸ್ತ ರಾಯಚೂರು ಮಹಾನಗರದ ಜನತೆಗೆ

ದೀಪಾವಳಿ ಹಬ್ಬದ
ಹಾರ್ದಿಕ ಶುಭಾಶಯಗಳು!

ಸ್ವಚ್ಛ ಮತ್ತು ಹಸಿರು ರಾಯಚೂರು, ನಮ್ಮ ಗುರಿ.

Printed, Published and Owned by Gururaja K, H.No: # 4-4-401/94, Gulbraga Builders Layout, Opp: Navodaya Hospital, Yeragera Road,Raichur Taluk and District Raichur-584103.
Printing at Tunga Bimba Printers and Publishers, H.No: # 4-4-401/94, Gulbraga Builders Layout, Opp: Navodaya Hospital, Yeragera Road,Raichur Taluk and District Raichur-584103. Editor: Gururaja.K